ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಸಿಂಡಿಕೇಟ್–30/ 08 /2025–26 ದಿನಾಂಕ: 02.04.2025

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 27.03.2025 ರಂದು ಜರುಗಿದ 30ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 27.03.2025 ರಂದು ಜರುಗಿದ 30ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಸಿಂಡಿಕೇಟ್-30/ 02 /2025-26 ದಿನಾಂಕ:02.04.2025

ದಿನಾಂಕ 27.03.2025 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ 30ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಪ್ರೊ. ಕೆ. ಆರ್. ಜಲಜಾ | ಸದಸ್ಯರು |
| 3. | ಡಾ. ಬಿ. ಆರ್. ಸುಪ್ರೀತ್ | ಸದಸ್ಯರು |
| 4. | ಡಾ. ಚೈತ್ರ ಟಿ. ಎಂ. | ಸದಸ್ಯರು |
| 5. | ಡಾ. ಸುಮಯಾ ಫಾತೀಮಾ | ಸದಸ್ಯರು |
| 6. | ಡಾ. ಎಂ. ಆರ್. ಲಕ್ಷ್ಮೀನಾರಾಯಣ | ಸದಸ್ಯರು |
| 7. | ಡಾ. ಎಲಿಝಾಬೆತ್ ಜಾಸ್ಮಿನ್ | ಸದಸ್ಯರು |
| 8. | ಶ್ರೀಮತಿ. ಡಿ. ಆರ್. ಸುಧಾ | ಸದಸ್ಯರು |
| 9. | ಶ್ರೀಮತಿ ಆಯೇಷಾ ಫರ್ಜಾನಾ | ಸದಸ್ಯರು |
| 10. | ಡಾ. ಹೆಚ್. ಕೃಷ್ಣರಾಮ್ | ಸದಸ್ಯರು |
| 11. | ರೆವ್ ಡಾ. ಫ್ರಾನ್ಸಿಸ್ ಅಸಿಸಿ ಅಲ್ಮೇದಾ | ಸದಸ್ಯರು |
| 12. | ಶ್ರೀ ವಿ. ಶಿವಕುಮಾರ್ | ಸದಸ್ಯರು |
| 13. | ಶ್ರೀ ಕೆ.ಪಿ. ಪಾಟೀಲ್ | ಸದಸ್ಯರು |
| 14. | ಶೀಮತಿ. ಶಿಲ್ಪಶ್ರೀ. ವಿ.ಎನ್ | ಸದಸ್ಯರು |
| 15. | ಡಾ. ಕೆ. ಶಿವಶಂಕರ್ | ಸದಸ್ಯರು |
| 16. | ಪ್ರೊ. ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 17. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ<br>ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ, ಕುಲಸಚಿವರು ಸಭೆಯ ಅಧ್ಯಕ್ಷತೆ ವಹಿಸಿದ ಮಾನ್ಯ ಕುಲಪತಿಗಳಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೆ ಸ್ವಾಗತವನ್ನು ಕೋರಿ, ಸಭೆಯನ್ನು ಉದ್ದೇಶಿಸಿ ಪ್ರಸ್ತಾವಿಕವಾಗಿ ಮಾತನಾಡಲು ಮಾನ್ಯ ಕುಲಪತಿಗಳಿಗೆ ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ಕಳೆದ ಸಿಂಡಿಕೇಟ್ ಸಭೆಯ ದಿನಾಂಕ. 25.02.2025 ದಿಂದ ಇಲ್ಲಿಯವರೆಗೆ ವಿಶ್ವವಿದ್ಯಾಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ವಿವರಿಸಿದರು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 28(1)(ಡಿ)ರಡಿಯಲ್ಲಿ ಡಾ. ಕೆ.ಆರ್. ಜಲಜಾ, ಪ್ರಾಧ್ಯಾಪಕರು ಮತ್ತು ಡೀನರು, ವಾಣಿಜ್ಯ ನಿಕಾಯರವರನ್ನು 01.03.2025 ರಿಂದ ಒಂದು ವರ್ಷದ ಅವಧಿಗೆ ಹಿರಿಯ ಡೀನರಾಗಿ ಸರದಿಯ ಮೇಲೆ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನ ಮಾಡಲಾಗಿದೆ. ಅವರನ್ನು ಈ ಸಭೆಗೆ ಸ್ವಾಗತಿಸುತ್ತೇನೆ. ಇದುವರೆಗೆ ಹಿರಿಯ ಡೀನರಾಗಿ ಸಿಂಡಿಕೇಟ್ ಸಭೆಯ ಕಲಾಪಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡುತ್ತಿದ್ದ, ಡಾ. ಜ್ಯೋತಿ ವೆಂಕಟೇಶ್, ಪ್ರಾಧ್ಯಾಪಕರು ಇವರು ತಮ್ಮ ಸದಸ್ಯತ್ವದ ಅವಧಿ ಪೂರೈಸಿರುತ್ತಾರೆ. ಅವರ ಸಹಾಯ ಮತ್ತು ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ, ಅವರು ಸಲ್ಲಿಸಿದ ಸೇವೆಯನ್ನು ಗೌರವಿಸಿ ದಾಖಲಿಸಲಾಗುವುದು.

2. ಪ್ರೊ. ಬಿ. ರಮೇಶ, ಪ್ರಾಧ್ಯಾಪಕರು, ಸಮಾಜ ಕಾರ್ಯ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ಇವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ)ರಾಗಿ ಸರ್ಕಾರದಿಂದ ನೇಮಕಗೊಂಡು ದಿ.03.03.2025ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಈ ಸಭೆಗೆ ಅವರನ್ನು ಸ್ವಾಗತಿಸುತ್ತೇನೆ. ಡಾ. ಆನಂದ್ ಕುಮಾರ್ ಸಿ. ಎಸ್ ರವರು ಕುಲಸಚಿವರು (ಮೌಲ್ಯಮಾಪನ)ರಾಗಿ ಕೆಲಸ ನಿರ್ವಹಿಸಿ ತಮ್ಮ ಮಾತೃ ವಿಶ್ವವಿದ್ಯಾನಿಲಯಕ್ಕೆ ಮರಳಿದ್ದಾರೆ. ಅವರು ನೀಡಿದ ಸಹಾಯ ಮತ್ತು ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ, ಅವರು ಸಲ್ಲಿಸಿದ ಸೇವೆಯನ್ನು ಗೌರವಿಸಿ ದಾಖಲಿಸಲಾಗುವುದು.

3. ದಿನಾಂಕ 03 ರಿಂದ 08 ಜನವರಿ 2025 ರಂದು ಮದ್ರಾಸ್ ವಿಶ್ವವಿದ್ಯಾಲಯ ಚೆನ್ನೈನಲ್ಲಿ ಜರುಗಿದ ದಕ್ಷಿಣ ವಲಯ ವಿಶ್ವವಿದ್ಯಾಲಯಗಳ ಹಾಕಿ ಪಂದ್ಯಾಟದಲ್ಲಿ ಪುರುಷರ ತಂಡ ಪ್ರಥಮ ಸ್ಥಾನ ಪಡೆದು ಚಾಂಪಿಯನ್ನರಾಗಿ ಚಿನ್ನದ ಪದಕವನ್ನು ಪಡೆದಿರುತ್ತಾರೆ. ಈ ತಂಡ ಗುರು ಕುಲ ಕಂಗ್ರಿ ವಿಶ್ವವಿದ್ಯಾಲಯ, ಹರಿದ್ವಾರದಲ್ಲಿ ದಿನಾಂಕ 22 ರಿಂದ 28 ಫೆಬ್ರವರಿ 2025 ರಂದು ಜರುಗಿದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಹಾಕಿ ಪಂದ್ಯಾವಳಿಗಳಲ್ಲಿ ಭಾಗವಹಿಸಿ 3ನೇ ಸ್ಥಾನಗಳಿಸಿ ಕಂಚಿನ ಪದಕ ಪಡೆದಿರುತ್ತದೆ,

4. ದಿನಾಂಕ 23 ದಿಂದ 29 ಜನವರಿ 2025 ರಂದು ಮೈಸೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ವಿಶ್ವವಿದ್ಯಾಲಯದ ಮಹಿಳಾ ಕ್ರಿಕೆಟ್ ತಂಡ ಎರಡನೇ ಸ್ಥಾನಗಳಿಸಿ ಬೆಳ್ಳಿ ಪದಕ ಪಡೆದಿರುತ್ತದೆ. ಈ ತಂಡ ಓರಿಸ್ಸಾ ರಾಜ್ಯದ ಕೆ.ಐ.ಐ.ಟಿ ವಿಶ್ವವಿದ್ಯಾಲಯ, ಭುವನೇಶ್ವರದಲ್ಲಿ ಜರುಗಲಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪಂದ್ಯಾಟದಲ್ಲಿ ಆಡುತ್ತಾರೆ.

5. ದಿನಾಂಕ 13 ದಿಂದ 17 ಫೆಬ್ರವರಿ 2025 ರಂದು ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಜರುಗಿದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ವೇಟ್ ಲಿಫ್ಟಿಂಗ್ ಪಂದ್ಯಾಟದಲ್ಲಿ ಶೇಷಾದ್ರಿಪುರಂ ಸಂಜೆ ಮಹಾವಿದ್ಯಾಲಯದ ಕುಮಾರಿ ನಕುಶಾ ಪಿ. ಪಾಟೀಲ್‌ರವರು 6ನೇ ಸ್ಥಾನ ಪಡೆದು ಖೇಲೋ ಇಂಡಿಯಾ ಪಂದ್ಯಗಳಲ್ಲಿ ಭಾಗವಹಿಸಲು ಅರ್ಹತೆ ಹೊಂದಿದ್ದಾರೆ.

6. ದಿನಾಂಕ 28.02.2025ರಂದು ವಿಜ್ಞಾನ ವಿಭಾಗಗಳ ಸಹಯೋಗದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು. ಅದೇ ದಿವಸ ಎನ್.ಎಸ್.ಎಸ್. ಯುವಜನೋತ್ಸವದ ಉದ್ಘಾಟನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ರಂದೀಪ್ ಡಿ. ಐಎಎಸ್ ರವರು ನೆರವೇರಿಸಿದರು. ಮಾನ್ಯ ಕುಲಪತಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

7. ದಿನಾಂಕ 01.03.2025ರಂದು ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ವಿಶ್ವವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ "ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳು" ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿತ್ತು. ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಲತಾ ಕುಮಾರಿ ಐಎಎಸ್., ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮಾನ್ಯ ಕುಲಪತಿಗಳು ಅಧ್ಯಕ್ಷತೆ ವಹಿಸಿದ್ದರು.

8. ದಿನಾಂಕ 06.03.2025ರಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕೋಶ ಆಯೋಜಿಸಿದ "ಸಾಮಾಜಿಕ ಸುಧಾರಣೆಗಳು ಮತ್ತು ಪ್ರಗತಿಯ ಪರಂಪರೆ: ಡಿ. ದೇವರಾಜು ಅರಸುರವರ ಆಡಳಿತ ಕೊಡುಗೆಗಳ ಸ್ಮರಣೆ" ಕುರಿತು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಒಂದು ದಿವಸದ ವಿಚಾರ ಗೋಷ್ಠಿಯಲ್ಲಿ, ಉಪ ಪೋಲೀಸ್ ಮಹಾನಿರೀಕ್ಷಕರಾದ ಶ್ರೀ ರವಿ ಚನ್ನಣ್ಣನವರ, ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕಾಂತರಾಜು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಬಂಜಗೆರೆ ಜಯಪ್ರಕಾಶ ರವರು ಗೌರವ ಅತಿಥಿಗಳಾಗಿ ಆಗಮಿಸಿದ್ದರು.

9. ದಿನಾಂಕ 12.03.2025ರಂದು ಹಣಕಾಸು ಸಮಿತಿ ಸಭೆಯನ್ನು ಜರುಗಿಸಿ, 2025–26ನೇ ಹಣಕಾಸು ಸಾಲಿನ ವಾರ್ಷಿಕ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಲಾಯಿತು.

10. 14.03.2025ರಂದು ರಾಜ್ಯಶಾಸ್ತ್ರ ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿ ಆಯೋಜಿಸಿದ "2ನೇ ಶತಮಾನದಲ್ಲಿ ರಾಜ್ಯ ಶಾಸ್ತ್ರದ ಕಲಿಕಾ ಅಧ್ಯಯನದ ಆದ್ಯತೆ ಮತ್ತು ಅಗತ್ಯ" ಕುರಿತು ಒಂದು ದಿವಸದ ಕಾರ್ಯಾಗಾರದ ಉದ್ಘಾಟನೆಯನ್ನು ಕುಲಪತಿಗಳು ನೆರವೇರಿಸಿದರು. ಪ್ರೊ. ಸಂದೀಪ ಶಾಸ್ತ್ರಿ, ಉಪಾಧ್ಯಕ್ಷರು, ನಿಟ್ಟೆ ವಿಶ್ವವಿದ್ಯಾಲಯ, ಬೆಂಗಳೂರು, ಹಾಗೂ ಪ್ರೊ. ಹರೀಶ ರಾಮಸ್ವಾಮಿ, ನಿಕಟಪೂರ್ವ ಕುಲಪತಿಗಳು, ರಾಯಚೂರು ವಿಶ್ವವಿದ್ಯಾಲಯ, ರವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

11. ದಿನಾಂಕ 15.03.2025ರಂದು ವಿಶ್ವವಿದ್ಯಾಲಯದ ಜಾಗತಿಕ ಭಾಷಾ ಕೇಂದ್ರದ 40ನೇ ವಾರ್ಷಿಕೋತ್ಸವದ ಅಂಗವಾಗಿ "Opportunities in Japan Today" ವಿಚಾರ ಸಂಕಿರಣ ಮತ್ತು Japanese Film Screening ಕಾರ್ಯಕ್ರಮವನ್ನು Japan Consulate General ರವರ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು. ಜಪಾನ ದೇಶದ ಕೌನ್ಸುಲೇಟ್ ಜನರಲ್‌ರವರಾದ ಗೌರವಾನ್ವಿತ ನಕಾನೆ ರವರು ಮತ್ತು ಭಾರತ ಸರ್ಕಾರದ ವಿದೇಶಾಂಗ ಇಲಾಖೆಯ ಜಪಾನ ಸಲಹೆಗಾರರಾದ ಪ್ರೊ. ಅಶೋಕ ಕುಮಾರ ಚಾವ್ಲಾ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕುಲಪತಿಗಳು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

12. ದಿನಾಂಕ 17.03.2025ರಂದು ಬೆಂಗಳೂರಿನ ಲಯನ್ಸ್ ಕ್ಲಬ್ ಮತ್ತು ಎನ್.ಎಸ್.ಎಸ್. ಸಹಯೋಗದಲ್ಲಿ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಇದರ ಉಪಯೋಗ ಪಡೆದರು.

13. ದಿನಾಂಕ 18.03.2025ರಂದು ಯು.ಕೆ. ದೇಶದ ವೋಲ್ವರ್ ಹ್ಯಾಂಪ್ಟನ್ ವಿಶ್ವವಿದ್ಯಾಲಯದ ಶೈಕ್ಷಣಿಕ ತಂಡದೊಂದಿಗೆ ಉತ್ಕೃಷ್ಠ ಸಂಶೋಧನಾ ಕೇಂದ್ರ ಕುರಿತು ಚರ್ಚಿಸಲಾಯಿತು ಮತ್ತು ಅದೇ ದಿವಸ ಹೊಸದಾಗಿ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡಲು ರಚಿಸಲಾದ ಸಮಿತಿ ಪ್ರಸ್ತಾಪಿತ ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದವು.

14. ದಿನಾಂಕ 18.03.2025ರಂದು ಹೊಸದಾಗಿ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡಲು ರಚಿಸಲಾದ ತಜ್ಞರ ಸಮಿತಿ ಪ್ರಸ್ತಾಪಿತ ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಅದೇ ದಿವಸ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದವರು ಸಮಾಜ ವಿಜ್ಞಾನಗಳ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ರಿಸರ್ಚ್ ಮೆಥಡಾಲಜಿ ಕುರಿತ ಕಾರ್ಯಾಗಾರದ ಉದ್ಘಾಟನೆಯನ್ನು ನೆರವೇರಿಸಲಾಯಿತು.

15. ದಿನಾಂಕ 24.03.2025ರಂದು ಹಿರಿಯ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರ ಪದೋನ್ನತಿಗಾಗಿ ಪರಿಶೀಲಿಸಿ ಶಿಫಾರಸ್ಸು ಮಾಡಲು ಆಯ್ಕೆ ಸಮಿತಿಗಳ ಸಭೆಗಳನ್ನು ಜರುಗಿಸಲಾಯಿತು.

16. ದಿನಾಂಕ 25.03.2025 ರಂದು ವಿದ್ಯಾವಿಷಯಕ ಪರಿಷತ್ ಸಭೆ ಜರುಗಿಸಲಾಯಿತು.

ಮೇಲಿನ ವರದಿಯನ್ನು ಮಂಡಿಸಿದ ನಂತರ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಸಭೆಯ ಕಾರ್ಯಸೂಚಿಯನ್ನು ಮಂಡಿಸಲು ತಿಳಿಸಿದರು.

ಅದರಂತೆ ಕುಲಸಚಿವರು ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

**ವಿಷಯ ಸಂಖ್ಯೆ: 01**

ವಿಷಯ: ದಿನಾಂಕ 31.12.2024 ರಂದು ಜರುಗಿದ ಸಿಂಡಿಕೇಟ್ 29ನೇ ಸಾಮಾನ್ಯ ಸಭೆ, ದಿನಾಂಕ 04.02.2025 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ ಮತ್ತು ದಿನಾಂಕ 25.02.2025 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ದಿನಾಂಕ 31.12.2024 ರಂದು ಜರುಗಿದ 29ನೇ ಸಿಂಡಿಕೇಟ್ ಸಾಮಾನ್ಯ ಸಭೆ, ದಿನಾಂಕ 04.02.2025 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ ಮತ್ತು ದಿನಾಂಕ 25.02.2025 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಕೆಳಗೆ ನಮೂದಿಸಿದ ಅಭಿಪ್ರಾಯಗಳೊಂದಿಗೆ ಅನುಮೋದಿಸಲಾಯಿತು.**

**1. ದಿನಾಂಕ. 31.12.2024 ರ ಸಿಂಡಿಕೇಟ್**

| | |
|---|---|
| **7. Request to Bangalore University to allot 50 Acres of Land for Constructing Hostels for the students of Bengaluru City University.** | **ಈ ಕುರಿತು ಅನುಸರಣಾ ಕ್ರಮಗಳನ್ನು ಕೈಗೊಂಡು ಅಗತ್ಯ ಜಮೀನು ಪಡೆಯಲು ಕ್ರಮವಹಿಸುವುದು** |
| **8. ವಿಶ್ವವಿದ್ಯಾನಿಲಯ ಅಥವಾ ಅಂಗ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆ ಆಧಾರದಲ್ಲಿ/ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಮಾತೃತ್ವ (ಹೆರಿಗೆ) ರಜೆ ಸೌಲಭ್ಯ ವಿಸ್ತರಿಸುವ ಪ್ರಸ್ತಾವನೆ.** | **ಕೂಡಲೇ ಸರ್ಕಾರಕ್ಕೆ ಪತ್ರ ಬರೆಯುವುದು** |

| | |
|---|---|
| **10. Request to take necessary steps to Survey the Central College Campus Land.** | ಸದಸ್ಯರಾದ ಶ್ರೀ ಕೆ. ಪಿ. ಪಾಟೀಲ್‌ರವರು ವಿಷಯವನ್ನು ಪ್ರಸ್ತಾಪಿಸಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಒಟ್ಟು ಜಮೀನಿನ ಅಳತೆ ತಿಳಿದುಕೊಳ್ಳಲು **Survey** ಅಗತ್ಯವಿದೆ, ಕಾರಣ ಈ ಕೆಲಸವನ್ನು ಆದ್ಯತೆಯ ಮೇಲೆ ಮಾಡಬೇಕೆಂದು ತಿಳಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಶ್ವವಿದ್ಯಾನಿಲಯದ ಎರಡು ಆವರಣಗಳನ್ನು ಜೋಡಿಸಲು **Sky Walk** ನಿರ್ಮಿಸುವ ಹಂತ ಪ್ರಗತಿಯಲ್ಲಿದ್ದು, ಅದಕ್ಕೆ ತಗಲುವ ವೆಚ್ಚ ವಿಶ್ವವಿದ್ಯಾನಿಲಯ ಭರಿಸುವುದಾದಲ್ಲಿ ಬೇಗನೆ ಅನುಮೋದನೆ ನೀಡುವ ಸಾಧ್ಯತೆ ಇದೆ. ಕಾರಣ ಈ ಕುರಿತು ಬಿಬಿಎಂಪಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೇಗ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. |

****

ಮಾನ್ಯ ಸದಸ್ಯರು ಬೇರೆ ಪ್ರದೇಶಗಳಿಂದ ಬರುವ ಸದಸ್ಯರಿಗೆ ಅಗತ್ಯ ಸೌಕರ್ಯಗಳನ್ನು ಹೊಂದಿದ ಒಂದು ಕೊಠಡಿಯ ಅಗತ್ಯವಿದ್ದು, ಪ್ರಾಧಿಕಾರದ ಸದಸ್ಯರಿಗೆ ಒಂದು ಕೊಠಡಿ ನೀಡುವ ವಿಷಯ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಕಾರಣ ಕೂಡಲೇ ಅಗತ್ಯ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು. ಈ ಕುರಿತು ಕ್ರಮವಹಿಸಲು ಮಾನ್ಯ ಕುಲಪತಿಗಳು ಕುಲಸಚಿವರಿಗೆ ಸೂಚಿಸಿದರು.

**ವಿಷಯ ಸಂಖ್ಯೆ: 2**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2025–26ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಬಗ್ಗೆ.

***ಪರಾಮರ್ಶಕ ಟಿಪ್ಪಣಿ***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2025–26ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 48 ಪ್ರಕಾರ ಕರಡು ಆಯವ್ಯಯ ಅಂದಾಜು ಪತ್ರವನ್ನು ದಿನಾಂಕ 12.03.2025 ರಂದು ಜರುಗಿದ ಹಣಕಾಸು ಸಮಿತಿಯ ಮುಂದೆ ಮಂಡಿಸಲಾಗಿ ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತಾರೆ.

**ಹಣಕಾಸು ಸಮಿತಿಯ ತೀರ್ಮಾನ:**

**ಆಯವ್ಯಯ ಅಂದಾಜು ಪತ್ರದಲ್ಲಿ ನಮೂದಿಸಲಾದ 2024–25ನೇ ಸಾಲಿನ ಪರಿಷ್ಕೃತ ಅಂದಾಜುಗಳನ್ನು 2024–25ನೇ ಸಾಲಿನ ಮಾರ್ಚ್ ಅಂತ್ಯಕ್ಕೆ ವೆಚ್ಚ ಮಾಡುವ ವಾಸ್ತವಿಕ ಮೊತ್ತಕ್ಕೆ ಸೀಮಿತಗೊಳಿಸಿ ಪರಿಷ್ಕರಿಸಲು ಸೂಚಿಸಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2025–26ನೇ ಆಯವ್ಯಯ ಅಂದಾಜು ಪತ್ರಕ್ಕೆ ಸರ್ವಾನುಮತದ ಅನುಮೋದನೆ ನೀಡಲು ಹಣಕಾಸು ಸಮಿತಿ ತೀರ್ಮಾನಿಸಿತು.**

ಮೇಲಿನ ಹಣಕಾಸು ಸಮಿತಿ ಶಿಫಾರಸ್ಸುಗಳನ್ನು ದಿನಾಂಕ 25.03.2025 ರಂದು ಜರುಗಲಿರುವ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲಾಗಿದೆ. ಸದರಿ ಪ್ರಾಧಿಕಾರದ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಒದಗಿಸಲಾಯಿತು.

ವಿಶ್ವವಿದ್ಯಾನಿಲಯದ 2025-26ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 48 ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

ಬೆಂಗಳೂರು ನಗರ ವಿಶ್ವವಿದ್ಯಾನಿಲಯ 2017-18ರಲ್ಲಿ ಪ್ರಾರಂಭಗೊಂಡು 7 ವರ್ಷ ಪೂರೈಸಿದ್ದು 2018-19ನೇ ಸಾಲಿನಿಂದ ಶೈಕ್ಷಣಿಕ ಕಾರ್ಯಕ್ರಮಗಳ ಜೊತೆಗೆ ಹಣಕಾಸಿನ ಸ್ವೀಕೃತಿ ಮತ್ತು ವೆಚ್ಚಗಳು ಆರಂಭವಾಗಿ ಇಲ್ಲಿಯವರೆಗೆ 7 ಬಜೆಟ್‌ಗಳನ್ನು ಮಂಡಿಸಿದ್ದು, ಪ್ರಸ್ತುತ 2025-26ನೇ ಸಾಲಿಗೆ 8ನೇ ಆಯವ್ಯಯ ಅಂದಾಜು ಪತ್ರ ಮಂಡಿಸಲಾಗುತ್ತಿದೆ. 2018-19ರಲ್ಲಿ ರೂ. 3.5 ಕೋಟಿಗಳ ಬಜೆಟ್ ಗಾತ್ರದಿಂದ ಪ್ರಾರಂಭಿಸಿ ಇಂದು 232 ಕೋಟಿಗಳು ತಲುಪಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲಾಗಿದೆ. ಐತಿಹಾಸಿಕ ಕಟ್ಟಡಗಳ ನವೀಕರಣ, ಪ್ರಾಯೋಗಾಲಯಗಳ ಸ್ಥಾಪನೆ ಹಾಗೂ ಅಭಿವೃದ್ಧಿ, ಪ್ರಾಯೋಗಾಲಯಗಳ ಉಪಕರಣಗಳ ಖರೀದಿ, ಗ್ರಂಥಾಲಯ ಆಧುನೀಕರಣ ಹಾಗೂ ಸೌಲಭ್ಯಗಳ ಅಭಿವೃದ್ಧಿ, ಕ್ಯಾಂಪಸ್ ಸುಂದರೀಕರಣ, ಉದ್ಯಾನವನದ ನಿರ್ಮಾಣ 7 ಮಹಡಿಗಳ ಶೈಕ್ಷಣಿಕ ಭವನ, ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಸೌಕರ್ಯಗಳನ್ನು ಹೊಂದಿರುವ ಕ್ರೀಡಾ ಕಾಂಪ್ಲೆಕ್ಸ್, ಆಟದ ಮೈದಾನ, ಈಜುಕೊಳ ಇವೆಲ್ಲವುಗಳನ್ನು ವಿಶ್ವವಿದ್ಯಾನಿಲಯ ಆಂತರಿಕ ಸಂಪನ್ಮೂಲಗಳಿಂದ ನಿರ್ಮಿಸಲಾಗಿದೆ. ಈ ಕಾಮಗಾರಿಗಳು ಮುಕ್ತಾಯಗೊಂಡು ಉಪಯೋಗಕ್ಕೆ ಲಭ್ಯವಾಗಿದೆ. ಇವುಗಳ ಜೊತೆಗೆ ಪರೀಕ್ಷಾ ವಿಭಾಗಕ್ಕೆ, ಅಗತ್ಯವಾದ ಪರಿಕರಗಳು ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಪ್ರಯೋಗಾಲಯ ಉಪಕರಣಗಳು ಗ್ರಂಥಾಲಯ ಡಿಜಿಟಲೀಕರಣ, ಪೀಠೋಪಕರಣಗಳನ್ನು ಒದಗಿಸುವ ಕೆಲಸಗಳು ಆಗಿರುತ್ತವೆ. ಇಂದಿನ ಕಾಲಘಟ್ಟಕ್ಕೆ ಅಗತ್ಯವಾದ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ. B.Com, B.Com (Fintech), BCA, B.Sc. (Computer Science) ಕೋರ್ಸುಗಳನ್ನು MBA ಕೋರ್ಸಿಗೆ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಿ, ಶೈಕ್ಷಣಿಕ ಪ್ರಗತಿಯ ಜೊತೆಗೆ ಹಣಕಾಸಿನ ಸ್ಥಿತಿಯ ಉತ್ತಮಗೊಂಡಿರುತ್ತದೆ. ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದು, ಈ ವರ್ಷ ಸುಮಾರು 4,500 ವಿದ್ಯಾರ್ಥಿಗಳ ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಧ್ಯಯನ ಮಾಡುತ್ತಿದ್ದಾರೆ.

ಗಾಂಧಿ ಅಧ್ಯಯನ ಕೇಂದ್ರವನ್ನು ವಿಧಿವತ್ತಾಗಿ ಹೊಸ ಶೈಕ್ಷಣಿಕ ಕಟ್ಟಡದಲ್ಲಿ ಪ್ರಾರಂಭಿಸಲಾಗಿದೆ, ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಬರುವ ವರ್ಷದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ವಿದೇಶಿ ವಿಶ್ವವಿದ್ಯಾಲಯಗಳು ಮತ್ತು ಬ್ರಿಟಿಷ್ ಕೌನ್ಸಿಲ್‌ನೊಂದಿಗೆ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಇನ್‌ಫೊಸಿಸ್, ನ್ಯಾಸಕಾಮ್, ಎನ್‌ಎಸ್‌ಇ ಮುಂತಾದ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಈ ಒಡಂಬಡಿಕೆಗಳ ಅಡಿಯಲ್ಲಿ ಶೈಕ್ಷಣಿಕ /ಸಂಶೋಧನಾ ಚಟುವಟಿಕೆಗಳು ಪ್ರಗತಿಯಲ್ಲಿವೆ. ಇವುಗಳ ಪರಿಣಾಮವಾಗಿ ಯುಕೆ ದೇಶದ ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ನಮ್ಮ ವಿಶ್ವವಿದ್ಯಾಲಯದಲ್ಲಿ Wolverhampton – Bengaluru Centre (WBC) for Research and Innovation ಕೇಂದ್ರವನ್ನು ಸ್ಥಾಪಿಸಲು ತೀರ್ಮಾನಿಸಿ ಕಾರ್ಯೋನ್ಮುಖವಾಗಿದ್ದೇವೆ.

ಯುಕೆ ದೇಶದ ವಿಶ್ವವಿದ್ಯಾಲಯಕ್ಕೆ ಸ್ನಾತಕ ವಿದ್ಯಾರ್ಥಿಗಳನ್ನು ಇಂಟರ್ನ್‌ಶಿಪ್‌ಗಾಗಿ ಭೇಟಿ ನೀಡಿ ತರಬೇತಿ ಪಡೆದಿರುತ್ತಾರೆ.

ಈ ಎಲ್ಲ ಅಭಿವೃದ್ಧಿ ಕೆಲಸಗಳಿಗೆ ಅನುಗುಣವಾಗಿ, ಎಲ್ಲ ವಿಭಾಗಗಳ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಸಭೆ ಕರೆದು, ಅವರಿಂದ ಅಭಿಪ್ರಾಯಗಳನ್ನು ಪಡೆದು ಪ್ರಸ್ತುತ 2025-26ನೇ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಲಾಗಿದೆ. ಮಾನ್ಯ ಸದಸ್ಯರು ಆಯವ್ಯಯದ ಕುರಿತು ಸಲಹೆ ಸೂಚನೆಗಳನ್ನು ನೀಡಬೇಕೆಂದು ವಿನಂತಿಸಿ. 2025-26ನೇ ಸಾಲಿನ ಆಯವ್ಯಯದ ಸ್ಥೂಲ ಪರಿಚಯ ಮಾಡಿಕೊಡಲು ವಿತ್ತಾಧಿಕಾರಿಗಳಿಗೆ ತಿಳಿಸಿದರು.

ವಿತ್ತಾಧಿಕಾರಿಗಳ 2025-26ನೇ ಸಾಲಿನ ಆಯವ್ಯಯ ಅಂದಜು ಪತ್ರಗಳ ಸ್ವೀಕೃತಿ ಮತು ವೆಚ್ಚಗಳ ಕುರಿತು ಮಾಹಿತಿ ನೀಡಿ 2024-25ನೇ ಸಾಲಿನ ಆಯವ್ಯಯಗಳೊಂದಿಗೆ ಹೊಲಿಸಿ ಕೆಳಕಂಡ ವಿವರಗಳನ್ನು ನೀಡಿದರು.

ಈ ವರ್ಷ ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಯುಯುಸಿಎಂಎಸ್ ತತ್ರಾಂಶದಲ್ಲಿ ನಿಗದಿಪಡಿಸಿದ ಮಾದರಿಯಲ್ಲಿ ಆಯವ್ಯಯ ಅಂದಾಜು ಪತ್ರ ಸಿದ್ಧಪಡಿಸಲಾಗಿದೆ. ಕಳೆದ ವರ್ಷದ 2024-25ನೇ ಸಾಲಿನ ಸ್ವೀಕೃತಿ ಮೊತ್ತ 197.76 ಕೋಟಿ ಇದ್ದು, ಅದು 2025-26ನೇ ಸಾಲಿಗೆ 233.03 ಕೋಟಿ ಅಂದಾಜಿಸಲಾಗಿದ್ದು, ಶೇಕಡಾ 10.8% ರಷ್ಟು ಹೆಚ್ಚಾಗಿರುತ್ತದೆ. ಅದರಂತೆ ವೆಚ್ಚದ ನಿರ್ವಹಣೆಯ 2024-25ನೇ ಸಾಲಿಗೆ 190.20 ಕೋಟಿ ಅಂದಾಜಿಸಲಾಗಿದ್ದು, ವಾಸ್ತವಿಕ ವೆಚ್ಚ 55.89 ಕೋಟಿಗಳಾಗಿರುತ್ತದೆ. ಈ ವರ್ಷ ವೆಚ್ಚವನ್ನು 225.62 ಎಂದು ಅಂದಾಜಿಸಲಾಗಿದೆ. ಇವುಗಳಲ್ಲಿ ಬಂಡವಾಳ ಯೋಜನಾ ನಿಧಿ ಪಾವತಿ (Capital Expenditure) 102.60 ಕೋಟಿ ಮತ್ತು ರಾಜಸ್ವ ಸ್ವೀಕೃತಿ (Revenue Receipt) ಗಳನ್ನು 123.02 ಎಂದು ಅಂದಾಜಿಸಲಾಗಿದೆ. 2024-25 ಮತ್ತು 2025-26ನೇ ಸ್ವೀಕೃತಿ ಮತ್ತು ವೆಚ್ಚಗಳ ಅಂದಾಜುಗಳನ್ನು ಪರಿಶೀಲಿಸಲಾಗಿ, 2024-25ನೇ ಸಾಲಿನಲ್ಲಿ ಒಟ್ಟು ಸ್ವೀಕೃತಿ 108.32 ಕೋಟಿ (ಆರಂಭಿಕ ಶಿಲ್ಕು ಹೊರತುಪಡಿಸಿ), ಇದಕ್ಕೆ ಸಂಬಂಧಿಸಿದಂತೆ ವೆಚ್ಚ 55.89 ಕೋಟಿಗಳಾಗಿರುತ್ತದೆ. 2025-26ನೇ ಸಾಲಿನಲ್ಲಿ ಒಟ್ಟು ಸ್ವೀಕೃತಿ 232.56 ಕೋಟಿ ಮತ್ತು ವೆಚ್ಚ 224.12 ಕೋಟಿ ಎಂದು ಅಂದಾಜಿಸಲಾಗಿದ್ದು, ಉಳಿಕೆ 8.43 ಕೋಟಿ ಆಗಿರುತ್ತದೆ. ಹೀಗಾಗಿ ಒಟ್ಟಾರೆಯಾಗಿ ವಿಶ್ವವಿದ್ಯಾನಿಲಯ ಆಯವ್ಯಯ ಉಳಿಕೆಯ ಆಯವ್ಯಯವಾಗಿದ್ದು, ವಿವರಗಳನ್ನು ಆಯವ್ಯಯ ಪತ್ರದಲ್ಲಿ ನೀಡಲಾಗಿದೆ ಎಂದು ತಿಳಿಸಿ, ದಿನಾಂಕ 12.03.2025 ರಂದು ಜರುಗಿದ ಹಣಕಾಸು ಸಮಿತಿ ನೀಡಿದ ಸಲಹೆಗಳಂತೆ 2025-26ನೇ ಸಾಲಿನ ಆಯವ್ಯಯ ಅಂದಾಜು ಪತ್ರದಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಿ ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆ.ಪಿ. ಪಾಟೀಲ್ ರವರು ಅಯವ್ಯಯ ಅಂದಾಜು ಪತ್ರಗಳ ಮೇಲೆ ಚರ್ಚೆ ಪ್ರಾರಂಭಿಸುತ್ತಾ ಪ್ರಥಮವಾಗಿ 2018-19 ರಲ್ಲಿದ್ದ ರೂ. 3.5 ಕೋಟಿ ರೂಪಾಯಿಗಳ ಆಯವ್ಯಯ ಇಂದು 2025-26ನೇ ಸಾಲಿಗೆ ರೂ. 233 ಕೋಟಿಗಳ ಗಾತ್ರದ ಆಯವ್ಯಯ ಸಿದ್ಧಪಡಿಸಿರುವುದಕ್ಕೆ ಕುಲಪತಿಗಳಿಗೆ ಹಾಗೂ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳ ಅಭಿನಂದನೆಗಳನ್ನು ಸಲ್ಲಿಸಿದರು. ಕಳೆದ ವರ್ಷದ ಆಯವ್ಯಯ ಪತ್ರದ ಪ್ರಕಾರ ವಿವಿಧ ಶೀರ್ಷಿಕೆಗಳಲ್ಲಿ ನಿಗದಿಪಡಿಸಿದ ಅನುದಾನಗಳನ್ನು ವೆಚ್ಚ ಮಾಡಿರುವುದಿಲ್ಲ, ಒಟ್ಟಾರೆ ವೆಚ್ಚ ಕೇವಲ 25% ಆಗುತ್ತದೆ. ಇದನ್ನು ಗಮನಿಸಿದಲ್ಲಿ, ಬಜೆಟ್‌ನಲ್ಲಿ ಕಲ್ಪಿಸಿರುವ ಅನುದಾನವನ್ನು ನಿಯಮಾನುಸಾರ ವೆಚ್ಚ ಮಾಡದೆ ಹಾಗೆಯ ಮುಂದುವರೆಸಿದ್ದು ಕಂಡು ಬರುತ್ತದೆ. ಒದಗಿಸಲಾದ ಅನುದಾನವನ್ನು ಬಳಕೆ ಮಾಡಿಕೊಂಡಿದ್ದಲ್ಲಿ ವೆಚ್ಚದ ಪ್ರಮಾಣ ಹೆಚ್ಚಾಗಿ ಸಮತೋಲನ ಸಾಧಿಸಬಹುದಾಗಿತ್ತು ಎಂದು ಅಭಿಪ್ರಾಯ ಪಟ್ಟರು.

ವಿವಿಧ ಲೆಕ್ಕ ಶಿರ್ಷಿಕೆಗಳ ಅನುದಾನವನ್ನು ಉಪಯೋಗಿಸಲು ವಿಭಾಗ / ಅಧಿಕಾರಿಗಳಿಗೆ ಕಾಲಕಾಲಕ್ಕೆ ಸೂಚನೆ ಕೊಟ್ಟು ಕ್ರಮವಹಿಸುವಂತೆ ಸೂಚಿಸಬೇಕು. ಈ ಕುರಿತು ಹಣಕಾಸು ವರ್ಷದ ಪ್ರಾರಂಭದಲ್ಲಿ

ಸಂಬಂಧಿಸಿದ ವಿಭಾಗದಿಂದ Action Plan ತರಿಸಿಕೊಂಡು ಅದರಂತೆ ಆಯವ್ಯಯದ ವೆಚ್ಚಗಳನ್ನು ನಿಯಂತ್ರಿಸಬೇಕು. ಈ ಕುರಿತು ಕಾಲಕಾಲಕ್ಕೆ ಸಭೆ ಕರೆದು ಸಲಹೆ ಸಹಕಾರ ನೀಡಬೇಕೆಂದು ತಿಳಿಸಿದರು.

ಡಾ. ಸುಪ್ರೀತ್ ರವರು ಪರೀಕ್ಷಾ ವಿಭಾಗದ ಮೌಲ್ಯಮಾಪನದ ಕೆಲಸವನ್ನು ಡಿಜಿಟಲೀಕರಣಗೊಳಿಸಬೇಕೆಂದು ತಿಳಿಸಿ ಅದಕ್ಕಾಗಿ ಅಗತ್ಯವಾದ ಎಲ್ಲ ಸೌಲಭ್ಯಗಳನ್ನು ಒದಗಿಸಲು ಕುಲಸಚಿವರು (ಮೌ) ರವರು ಒಂದು ಕ್ರಿಯಾ ಯೋಜನೆ ಸಿದ್ಧಪಡಿಸಬೇಕೆಂದು ಸಲಹೆ ನೀಡಿದರು.

ಸದಸ್ಯರಾದ ಶ್ರೀ ಕೆ.ಪಿ.ಪಾಟೀಲ್, ಶ್ರೀಮತಿ. ಡಿ. ಆರ್ ಸುಧಾ, ಡಾ. ಎಲಿಝಾಬೆತ್ ಜಾಸ್ಮಿನ್, ಡಾ. ಎಂ. ಆರ್. ಲಕ್ಷ್ಮೀನಾರಾಯಣ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿ, ಪರೀಕ್ಷಾ ವಿಭಾಗದ ಕಟ್ಟಡದ ಸ್ಥಿತಿಯನ್ನು ವಿವರಿಸಿ, ಆ ಕಟ್ಟಡವನ್ನು ಪುನರ್ ನಿರ್ಮಾಣವಾಗುವ ಅಗತ್ಯವಿದೆ. ಮೌಲ್ಯಮಾಪನ ಕೆಲಸಕ್ಕಾಗಿ ಒಂದು ಕೇಂದ್ರವನ್ನು ಸಿದ್ಧಪಡಿಸಿ ಅಗತ್ಯ ಸೌಕರ್ಯಗಳನ್ನು ಒದಗಿಸಿ ಮೌಲ್ಯಮಾಪನ ಮಾಡಿಸುವ ವ್ಯವಸ್ಥೆ ಆಗಬೇಕೆಂದು ಹೇಳಿದರು. ಅದರ ಜೊತೆಗೆ ವಿದ್ಯಾರ್ಥಿಗಳ ಆತಂಕಕ್ಕೆ ಕಾರಣರಾಗಿರುವ ಅಂಕಪಟ್ಟಿಗಳ ವಿತರಣೆ ಆಗದಿರುವ ವಿಷಯವನ್ನು ಪ್ರಸ್ತಾಪಿಸಿ, ಇದನ್ನು ಕುಲಸಚಿವರು (ಮೌ) ರವರು ಗಂಭಿರವಾಗಿ ಪರಿಗಣಿಸಿ ಕಳೆದ 3 ವರ್ಷಗಳಿಂದ ನೀಡದೇ ಇರುವ ಅಂಕಪಟ್ಟಿಗಳನ್ನು ಶೀಘ್ರವಾಗಿ ನೀಡಲು ಕ್ರಮವಹಿಸಬೇಕೆಂದು ಒತ್ತಾಯಿಸಿದರು. ಶ್ರೀಮತಿ. ಡಿ. ಆರ್. ಸುಧಾ ರವರು 2023-24ನೇ ಸಾಲಿನಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಇನ್ನು ಪ್ರಕಟಿಸಿಲ್ಲವೆಂದು ತಿಳಿಸಿ, ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ಈ ಪಟ್ಟಿಯ ಅಗತ್ಯವಿರುವುದರಿಂದ ಆದಷ್ಟು ಬೇಗ ರ್‍ಯಾಂಕ್ ಪಟ್ಟಿ ಪ್ರಕಟಿಸಲು ಕೋರಿದರು.

ರಾಜ್ಯ ಸರ್ಕಾರದ SCT ಮತ್ತು STP ಯೋಜನೆಗಳಿಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿ ಯಾವುದೇ ವೆಚ್ಚ ಮಾಡದಿರುವ ಕುರಿತು ಸದಸ್ಯ ತೀವ್ರವಾದ ಸಮಾಧಾನ ವ್ಯಕ್ತಪಡಿಸಿ, ರಾಜ್ಯ ಸರ್ಕಾರ SC/ST ಅಭಿವೃದ್ಧಿಗಾಗಿ ಈ ಯೋಜನೆ ಜಾರಿಗೆ ತಂದಿದ್ದು ಸರ್ಕಾರದಿಂದ ಅನುದಾನ ಪಡೆದು ಅದನ್ನು ವಿವೇಚನಾಯುಕ್ತವಾಗಿ ಬಳಕೆ ಮಾಡಬೇಕಾಗಿತ್ತು ಎಂದು ಸದಸ್ಯರಾದ ಶ್ರೀ ಕೆ.ಪಿ.ಪಾಟೀಲ್ ತಿಳಿಸಿದರು. ಶ್ರೀಮತಿ ಆಯೇಷಾ ಫರ್ಜಾನ ರವರು ಧಾರ್ಮಿಕ ಅಲ್ಪಸಂಖ್ಯಾತ ವಿದ್ಯಾರ್ಥಿಗೆ ಅಧ್ಯಯನಕ್ಕೆ ಕೇವಲ 10.00 ಲಕ್ಷಗಳ ಅನುದಾನ ಕಲ್ಪಿಸಿರುವುದನ್ನು ಹೆಚ್ಚಿಸಲು ಕೋರಿದರು. ಅದರಂತೆ ಸ್ಪರ್ಧಾತ್ಮಕ ಪರೀಕ್ಷಗಳ ಕೇಂದ್ರದ ಚಟುವಟಿಕೆಗಳನ್ನು ವೃತ್ತಿಪರಗೊಳಿಸಿ ನಮ್ಮ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳು ಆತ್ಮವಿಶ್ವಾಸದಿಂದ ಎದುರಿಸಲು ಅಗತ್ಯವಾದ ತರಬೇತಿ ನೀಡಲು ಬೇಗನೆ ಕ್ರಮವಹಿಸಲು ತಿಳಿಸಿದರು.

ಸದಸ್ಯರ ರೆವ್ ಡಾ. ಫ್ರಾನ್ಸಿಸ್ ಅಸಿಸಿ ಅಲ್ಮೇದಾರವರು ಅಲ್ಪ ಸಂಖ್ಯಾತ ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಕನಿಷ್ಠ 20.00 ಲಕ್ಷ ಮೊತ್ತವನ್ನು ನಿಗದಿಪಡಿಸಬೇಕೆಂದು ಒತ್ತಾಯಿಸಿದರು.

ಸದಸ್ಯರಾದ ಶ್ರೀ ಶಿವಕುಮಾರ್ ರವರು ಮತನಾಡಿ ಪರಿಶಿಷ್ಟ-ಜಾತಿ/ ಪಂಗಡ ವಿದ್ಯಾರ್ಥಿಗಳಿಗೆ ಸರ್ಕಾರದ ಹಾಗೂ ವಿಶ್ವವಿದ್ಯಾನಿಲಯ ಅನುದಾನ ಒಳಗೊಂಡಂತೆ ಬಜೆಟ್‌ನಲ್ಲಿರುವ ಎಲ್ಲ ಶೀರ್ಷಿಕೆಗಳ ಕುರಿತು ಕೈಗೊಳ್ಳಬೇಕಾದ ಕ್ರಮಗಳ Action Plan ಸಿದ್ಧಪಡಿಸಿ ಸಭೆಯ ಅನುಮೋದನೆ ಪಡೆಯ ಬೇಕೆಂದು ತಿಳಿಸಿದರು. ಸದಸ್ಯರಾದ ಡಾ. ಸುಪ್ರೀತ್ ರವರು Artificial Intelligence ಕುರಿತಾದ Technical Laboratory ಸ್ಥಾಪನೆ ಮಾಡಲು ಪ್ರತ್ಯೇಕವಾದ ಲೆಕ್ಕ ಶೀರ್ಷಿಕೆ ನೀಡದಿರುವ ಕುರಿತಂತೆ ಪ್ರಸ್ತಾಪಿಸಿ Artificial Intelligence Lab ರೊಬೊಟಿಕ್ ಒಳಗೊಂಡಂತೆ ಶ್ರೇಷ್ಠ ಮಟ್ಟದ ಪ್ರಯೋಗಾಲಯ ಸ್ಥಾಪಿಸಲು ಕನಿಷ್ಠ ರೂ. 8-10 ಕೋಟಿ ಅಗತ್ಯವಿದೆ ಎಂದು ತಿಳಿಸಿದರು. ಈ ಪ್ರಯೋಗಾಲಯದ ಉಪಯೋಗವನ್ನು ಸಂಯೋಜಿತ ಮಹಾವಿದ್ಯಾಲಯಗಳು ಮಾಡಿಕೊಳ್ಳಲು ಅವಕಾಶ ನೀಡಿ ಶುಲ್ಕ ವಸೂಲು ಮಾಡಿದಲ್ಲಿ, ವಿಶ್ವವಿದ್ಯಾನಿಲಯದ ಆದಾಯ ಹೆಚ್ಚುತ್ತದೆ ಎಂದು ತಿಳಿಸಿದರು. Fire Exinguisher ಗಾಗಿ ಕೇವಲ 2.00 ಕೋಟಿಗಳ ಅನುದಾನ

ಮೀಸಲಿಟ್ಟಿರುವ ಇದು ಎರಡು ಕ್ಯಾಂಪಸ್‌ಗಳ ವಿಲ್ಲ ಕಟ್ಟಡಗಳಿಗೆ ಅಗತ್ಯವಾದ Fire Exinguisher ಸ್ಥಾಪಿಸಲು ಸಾಕಾಗುವುದಿಲ್ಲ ಪರೀಕ್ಷಾ ವಿಭಾಗ ಸೇರಿದಂತೆ ಕ್ಯಾಂಪಸ್‌ನ ಎಲ್ಲ ಕಟ್ಟಡಗಳಿಗೆ ಅಗತ್ಯವಾದ Fire Exinguisher ಸ್ಥಾಪಿಸಲು ಅನುದಾನವನ್ನು ಹೆಚ್ಚಿಸುವ ಅಗತ್ಯವಿದೆ ಎಂದು ತಿಳಿಸಿದರು.

ಕುಲಪತಿಗಳ ವಿವರ ನೀಡಿ SCP ಮತ್ತು TSP ಯೋಜನೆ ಅಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರ ನೀಡಿದ ಅನುದಾನ ಜೊತೆಗೆ ವಿಶ್ವವಿದ್ಯಾನಿಲಯದ ನಿಧಿಯಿಂದಲೂ ಅನುದಾನ ನೀಡಿ ವಿದ್ಯಾರ್ಥಿಗಳಿಗೆ ಒಟ್ಟು 132 Laptop ಗಳನ್ನು ವಿತರಿಸಲಾಗಿದೆ. ಕಳೆದ ವರ್ಷ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಕಳೆದ ಕೆಲವು ವರ್ಷಗಳಿಂದ ಪರಿಶಿಷ್ಟ ಜಾತಿ/ ಪಂಗಡ/ ಗ್ರೂಪ್ಎ ವಿದ್ಯಾರ್ಥಿಗಳಿಗೆ ನೀಡಬೇಕಾದ Scholarship ಮೊತ್ತ ವಿಶ್ವವಿದ್ಯಾಲಯದ ಶುಲ್ಕದ ಮೊತ್ತವನ್ನು ಸೇರಿಸಿ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆ ಆಗುತ್ತಿದೆ. ವಿಭಾಗದ ಮುಖ್ಯಸ್ಥರ ಸಹಕಾರದಿಂದ ಅಂತಹ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಶುಲ್ಕವನ್ನು ವಸೂಲು ಆಗುತ್ತಿದೆ. ಲೆಕ್ಕ ಶೀರ್ಷಿಕೆಗಳನ್ನು ಯುಯುಸಿಎಂಎಸ್‌ನಲ್ಲಿ ಅಳವಡಿಸುವಾಗ ಹಳೆಯ ವಿಶ್ವವಿದ್ಯಾಲಯದಲ್ಲಿದ್ದ, ಹಲವಾರು ಶೀರ್ಷಿಕೆಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. ಉದಾಹರಣೆ ವಿವಿಧ ದತ್ತಿ ನಿಧಿಗಳು, ಅಧ್ಯಯನ ಸಂಸ್ಥೆಗಳು, ಪೀಠಗಳು, ವಿಶ್ವವಿದ್ಯಾನಿಲಯದಲ್ಲಿ ಇನ್ನು ಸ್ಥಾಪನೆಯಾಗಿಲ್ಲ ಆದರೂ ಯುಯುಸಿಎಂಎಸ್ ನಮೂನೆಯಲ್ಲಿ ಈ ಶೀರ್ಷಿಕೆಗಳ ಉಳಿದುಕೊಂಡಿವೆ ಬರುವ ವರ್ಷದಲ್ಲಿ ಎಲ್ಲ ವಿಭಾಗಗಳಿಂದ ಕೈಗೊಳ್ಳುವ ಕಾರ್ಯಕ್ರಮಗಳ ಕ್ರಿಯಾಯೋಜನೆ (Action Plan) ಪಡೆದು ಆಯವ್ಯಯದಲ್ಲಿ ಮೀಸಲಿಟ್ಟು ಅನುದಾನಗಳನ್ನು ವೆಚ್ಚ ಮಾಡಲು ಕುರಿತು ಕ್ರಮವಹಿಸಲಾಗುವುದು ಎಂದು ಹೇಳಿದರು.

ವಿತ್ತಾಧಿಕಾರಿಗಳ ವಿವರಣೆ ನೀಡಿ Artificial Intelligence Technical Lab ಯನ್ನು ಪ್ರಸ್ತುತ ಇರುವ 4–5 ಶೀರ್ಷಿಕೆಗೆ ಅನುದಾನ ಬಳಸಿ ಸ್ಥಾಪಿಸಬಹುದಾಗಿದೆ. ಅದಕ್ಕಾಗಿ ಪ್ರತ್ಯೇಕವಾದ ಲೆಕ್ಕ ಶೀರ್ಷಿಕೆ ನೀಡಲು ತಾಂತ್ರಿಕ ತೊಂದರೆಗಳಿವೆ ಎಂದು ತಿಳಿಸಿದರು. ಅಗತ್ಯವಾದಲ್ಲಿ Reappropriation ಮಾಡಿಕೊಳ್ಳಬಹುದೆಂದು ತಿಳಿಸಿದರು. Fire Safety ಕುರಿತಂತೆ ವಿವರವಾದ ಡಿಪಿಆರ್ ಸಿದ್ಧಪಡಿಸಲು ಸೂಚಿಸಲಾಗುವುದು ಅದರ ಆಧಾರದ ಮೇಲೆ ಅನುದಾನವನ್ನು ಪರಿಷ್ಕೃತ ಆಯವ್ಯಯದಲ್ಲಿ ಸೇರಿಸಲಾಗುವುದು ಎಂದು ತಿಳಿಸಿದರು.

ಕುಲಸಚಿವರು (ಮೌಲ್ಯಮಾಪನ) ರವರ ವಿವರಣೆ ನೀಡಿ ಪರೀಕ್ಷಾ ವಿಭಾಗದ ಕಟ್ಟಡ ಪುನರ್ ನಿರ್ಮಾಣ ಕೆಲಸ ಆಗಬೇಕಾಗಿದೆ ಆ ಕುರಿತು ಮಾನ್ಯ ಕುಲಪತಿಗಳು ಮತ್ತು ಕುಲಸಚಿವರೊಂದಿಗೆ ಚರ್ಚಿಸಲಾಗುವುದು. ಸಿಬ್ಬಂದಿಗಳ ಕೊರತೆ ತೀವ್ರವಾಗಿದ್ದು, ಪರೀಕ್ಷಾ ವಿಭಾಗಕ್ಕೆ ಅಗತ್ಯವಾದ ಸಿಬ್ಬಂದಿಗಳ ಸಂಖ್ಯೆಯ ಕೇವಲ 15% ಸಿಬ್ಬಂದಿಗಳಿಂದ ಪರೀಕ್ಷಾ ಕೆಲಸ ನಿರ್ವಹಿಸಲಾಗುತ್ತಿದೆ. ಸಿಬ್ಬಂದಿಗಳ ಅಗತ್ಯ ಖಂಡಿತವಾಗಿ ಇದೆ ಎಂದು ತಿಳಿಸಿದರು. ಪರೀಕ್ಷಾ ಮೌಲ್ಯಮಾಪನ ಡಿಜಟಲೀಕರಣದಿಂದ ಫಲಿತಾಂಶ ಪ್ರಕಟಣೆ ಸುಗಮವಾಗುತ್ತದೆ. ಈ ಕುರಿತು ವಿವರವಾದ ಕ್ರಿಯಾಯೋಜನೆಯನ್ನು (Action Plan) ಸಿದ್ಧಪಡಿಸಿ ಮಾನ್ಯ ಕುಲಪತಿಗಳಿಗೆ ಸಲ್ಲಿಸಲಾಗುವುದು ಪ್ರಾಧಿಕಾರ ಅನುಮೋದನೆ ಪಡೆದು ಅದನ್ನು ಜಾರಿಗೊಳಿಸಲು ಪ್ರಯತ್ನಿಸಲಾಗವುದು. ಅಂಕ ಪಟ್ಟಿಗಳ ಮುದ್ರಣ ನಿಜಕ್ಕೂ ಆತಂಕ ಉಂಟು ಮಾಡಿದೆ ಯುಯುಸಿಎಂಎಸ್ ಪ್ರಾರಂಭವಾದ ನಂತರ ವಿದ್ಯಾರ್ಥಿಗಳ ಅಂಕಗಳು ಒಳಗೊಂಡಂತೆ ಎಲ್ಲ ವಿವರಗಳನ್ನು NAD ನಲ್ಲಿ ದಾಖಲಿಸಲು ತಿಳಿಸಿ ಭೌತಿಕ ಅಂಕಪಟ್ಟಿ ನೀಡುವ ಅಗತ್ಯವಿಲ್ಲವೆಂದು ಸರ್ಕಾರದ ನಿರ್ದೇಶನವಿತ್ತು. ಭೌತಿಕ ಅಂಕಪಟ್ಟಿಗಳ ಅಗತ್ಯವನ್ನು ಮನಗಂಡು ವಿಶವ್ವಿದ್ಯಾನಿಲಯದ ಸಿಂಡಿಕೇಟ್ ನಿರ್ಣಯದ ಪ್ರಕಾರ ಭೌತಿಕ ಅಂಕಪಟ್ಟಿಗಳನ್ನು ಮುದ್ರಿಸಲಾಗುತ್ತಿದೆ. ಈಗ ಮುದ್ರಣ ಕೆಲಸ ಪ್ರಾರಂಭಿಸಿದ್ದು, ಮುಂಬರುವ 35–40 ದಿವಸಗಳಲ್ಲಿ ಬಾಕಿ

ಉಳಿದಿರುವ ಎಲ್ಲ ಅಂಕ ಪಟ್ಟಿಗಳನ್ನು ಮುದ್ರಿಸಿ ಆಯಾ ಮಹಾವಿದ್ಯಾಲಯಗಳಿಗೆ ವಿತರಿಸಲು ಗಂಭೀರವಾಗಿ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಸಾಮಾನ್ಯವಾಗಿ ರ್‍ಯಾಂಕ್ ಪಟ್ಟಿಯನ್ನು ಘಟಿಕೋತ್ಸವದ ಸಂದರ್ಭದಲ್ಲಿ ಪ್ರಕಟಿಸಲಾಗುತ್ತದೆ. ಈ ಸಲ ಪರೀಕ್ಷೆಗಳ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ರ್‍ಯಾಂಕ್ ಪಟ್ಟಿ ಹೊರಡಿಸಲು ವಿಳಂಬವಾಗಿದೆ. ರ್‍ಯಾಂಕ್ ಪಟ್ಟಿ ಪ್ರಕಟಿಸಲು ಯುಯುಸಿಎಂಎಸ್‌ನವರು ವಿದ್ಯಾರ್ಥಿಗಳ data fetch ಮಾಡಿ ಕೊಡಲು ಅವರನ್ನು ಸಂಪರ್ಕಿಸಿದ್ದು, ಒಂದು ವಾರದಲ್ಲಿ ನೀಡುವುದಾಗಿ ತಿಳಿಸಿದ್ದಾರೆ. ಅದು ಸ್ವೀಕರಿಸಿದ ತಕ್ಷಣ ಮುಂದಿನ 15 ದಿವಸಗಳಲ್ಲಿ ರ್‍ಯಾಂಕ್ ಪಟ್ಟಿ ಪ್ರಕಟಿಸಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಕುಲಸಚಿವರು, ಎಲ್ಲ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಸಕಾರಾತ್ಮಕ ಸೂಚನೆಗಳನ್ನು ನೀಡಿರುವುದಕ್ಕೆ ಅಭಿನಂದನೆಗಳು ಸಲ್ಲಿಸಿ, 2025–26ನೇ ಸಾಲಿನ ಆಯವ್ಯಯದ ಅನುಮೋದನೆಯಾದ ನಂತರ ಪ್ರತಿಯೊಂದು ಲೆಕ್ಕ ಶೀರ್ಷಿಕೆಗೆ ಕ್ರಿಯಾ ಯೋಜನೆ ಪಡೆದು ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರೊಂದಿಗೆ ಚರ್ಚಿಸಿ ಕ್ರಿಯಾ ಯೋಜನೆ ಪ್ರಕಾರ ಕಾರ್ಯಕ್ರಮ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರ ಸಕ್ರಿಯವಾಗಿ ಪಾಲ್ಗೊಂಡು ನೀಡಿದ ಸಲಹೆ ಸೂಚನೆಗಳಿಗೆ ಧನ್ಯವಾದಗಳನ್ನು ತಿಳಿಸಿದರು. ವಿದ್ಯಾರ್ಥಿಗಳ ಅದರಲ್ಲೂ ಪರಿಶಿಷ್ಟ ಜಾತಿ / ಪಂಗಡ ವರ್ಗ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ ವಿದ್ಯಾರ್ಥಿಗಳ ಕುರಿತು ವ್ಯಕ್ತಪಡಿಸಿದ ಕಳಕಳಿ ಮತ್ತು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಲು ತರಬೇತಿ ಕಾರ್ಯಕ್ರಮದ ಕುರಿತು ಚಿಂತನೆಗಳಿಗೆ ಶ್ಲಾಘನೆಯನ್ನು ವ್ಯಕ್ತಪಡಿಸಿದರು. ಅವುಗಳನ್ನು ವಿಶ್ವವಿದ್ಯಾನಿಲಯ ಗಣನೆಗೆ ತೆಗೆದುಕೊಂಡು ಆಯವ್ಯಯದ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಒದಗಿಸಿದ ಅನುದಾನಗಳನ್ನು ನಿಯಮಾವಳಿಗಳ ಪ್ರಕಾರ ಕ್ರಿಯಾಯೋಜನೆಯ ರೂಪಿಸಿ ವೆಚ್ಚ ಮಾಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿ 2025–26ನೇ ಸಾಲಿನ ಆಯವ್ಯಯ ಪತ್ರಕ್ಕೆ ಅನುಮೋದನೆ ನೀಡಲು ವಿನಂತಿಸಿದರು.

*ಸಿಂಡಿಕೇಟ್ ತೀರ್ಮಾನ:*

**ಸುದೀರ್ಘ ಚರ್ಚೆಯ ನಂತರ 2025–26ನೇ ಹಣಕಾಸು ವರ್ಷದ ಆಯವ್ಯಯ ಅಂದಾಜು ಪತ್ರಕ್ಕೆ ಸರ್ವಾನುಮತದ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 3**

ವಿಷಯ: 2025–26ನೇ ಶೈಕ್ಷಣಿಕ ವರ್ಷಕ್ಕೆ ಮಹಾವಿದ್ಯಾಲಯಗಳ ಸಂಯೋಜನೆಗೆ ಸಂಬಂಧಿಸಿದಂತೆ, a)ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ ಸಂಯೋಜನೆ ನವೀಕರಣ/ಹೊಸ ಕೋರ್ಸು / ಹೊಸ ವಿಷಯಗಳನ್ನು ಪ್ರಾರಂಭಿಸುವುದು, b) ಪ್ರವೇಶ ಸಂಖ್ಯೆಗಳನ್ನು ಹೆಚ್ಚಿಸುವುದು/ ಕಡಿಮೆಗೊಳಿಸುವುದು, c)ಕಾಲೇಜಿನ ಹೆಸರು ಮತ್ತು ವಿಳಾಸ ಬದಲಾವಣೆ, d)ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಣ, e)ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಮತ್ತು ಹೊಸ ಕಾಲೇಜುಗಳನ್ನು ಪ್ರಾರಂಭಿಸಲು, f)ಹಾಲಿ ಇರುವ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ಮುಂತಾದ ವಿಷಯಗಳಿಗೆ ಸಬಂಧಿಸಿದಂತೆ, ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸುಗಳ ಪರಿಶೀಲನೆ ಮತ್ತು ಅನುಮೋದನೆ ಕುರಿತು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59
2. ಸರ್ಕಾರಿ ಆದೇಶ ಸಂಖ್ಯೆ: ಇಡಿ/ 212/ ಯುಎನ್‌ಇ/ 2024, ಬೆಂಗಳೂರು, ದಿನಾಂಕ: 04.10.2024
3. ವಿ.ವಿ. ಅಧಿಸೂಚನೆ ಸಂಖ್ಯೆ:ಬೆಂ.ನ.ವಿ/ ಎ.ಸಿ.ಎ/ ಸಂಯೋಜನೆ/ 2024-25, ದಿನಾಂಕ: 28.10.2024
4. ವಿ.ವಿ. ಅಧಿಸೂಚನೆ ಸಂಖ್ಯೆ:ಬೆಂ.ನ.ವಿ/ಶೈ.ವಿ/ಸಂ/2024-25, ದಿನಾಂಕ:21.11.2024
5. ವಿ.ವಿ. ಅಧಿಸೂಚನೆ ಸಂಖ್ಯೆ: BCU/ ACA/ Affiliation/ LIC-Comm./ 487/ 2024-25 dated. 24.02.2025

***ಪರಮಾರ್ಶಕ ಟಿಪ್ಪಣಿ:***

1. ಉಲ್ಲೇಖ(1) ಮತ್ತು (2)ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59ರ ಸರ್ಕಾರದ ಆದೇಶದ ಪ್ರಕಾರ, 2025-26ನೇ ಶೈಕ್ಷಣಿಕ ವರ್ಷಕ್ಕೆ ಮಹಾವಿದ್ಯಾಲಯಗಳ ವಿವಿಧ ಪ್ರಕಾರಗಳ ಸಂಯೋಜನೆಗೆ ಸಂಬಂಧಿಸಿದಂತೆ, ಉಲ್ಲೇಖ(3)ರ ಅಧಿಸೂಚನೆಯನ್ನು ಪ್ರಮುಖ ದಿನ ಪತ್ರಿಕೆಗಳಲ್ಲಿ ದಿನಾಂಕ 29.10.2024ರಂದು ಪ್ರಕಟಿಸಿ, ಅರ್ಜಿಗಳನ್ನು ಆಹ್ವಾನಿಸಲಾಗಿದೆ.
    a) ಅಸ್ತಿತ್ವದಲ್ಲಿರುವ ಕಾಲೇಜುಗಳ ಸಂಯೋಜನೆ ನವೀಕರಣ
    b) ಹೊಸ ಕೋರ್ಸುಗಳ ವಿಷಯಗಳನ್ನು ಪ್ರಾರಂಭಿಸುವುದು
    c) ಪ್ರವೇಶ ಸಂಖ್ಯೆಗಳನ್ನು ಹೆಚ್ಚಿಸುವುದು/ಕಡಿಮೆಗೊಳಿಸುವುದು
    d) ಕಾಲೇಜಿನ ಹೆಸರು ಮತ್ತು ವಿಳಾಸ ಬದಲಾವಣೆ
    e) ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ನವೀಕರಣ
    f) ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಮತ್ತು ಹೊಸ ಕಾಲೇಜುಗಳನ್ನು ಪ್ರಾರಂಭಿಸುವುದು.
    g) ಹಾಲಿ ಇರುವ ಕಾಲೇಜುಗಳ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡುವುದು.
2. ವಿವಿಧ ಪ್ರಕಾರಗಳ ಸಂಯೋಜನೆಗೆ ಸಂಘ ಸಂಸ್ಥೆ ಹಾಗೂ ಕಾಲೇಜುಗಳಿಂದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ E- Governance (ಇ- ಆಡಳಿತ) ಸಿದ್ದಪಡಿಸಿದ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಅನ್ವಯಿಸುವ ಯು.ಯು.ಸಿ.ಎಂ.ಸ್ ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವಂತೆ ಸೂಚಿಸಲಾಗಿದೆ.
3. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ ಪ್ರಕರಣ 59(6)ರ ಪ್ರಕಾರದ ಸಂಯೋಜನೆ ಕೋರಿ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಲು ದಿನಾಂಕ 25.02.2025 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಾನ್ಯ ಕುಲಪತಿಗಳಿಗೆ ನೀಡಿದ ಅಧಿಕಾರದನ್ವಯ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ ಸದಸ್ಯರು/ ಡೀನರು/ ಪ್ರಾಧ್ಯಾಪಕರು ಹಾಗೂ ಮಾತೃ ವಿಶ್ವವಿದ್ಯಾಲಯದ ವಿಷಯ ತಜ್ಞರನ್ನು ಒಳಗೊಂಡ 22 ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಿ ಉಲ್ಲೇಖ(5)ರಂತೆ ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದಲ್ಲಿರುವ ನಿಬಂಧನೆಗಳ ಪ್ರಕಾರ ಪ್ರತಿ ವಿಚಾರಣಾ ಸಮಿತಿಯಲ್ಲಿ ಒಬ್ಬರು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಸದಸ್ಯರು ಇರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.
4. ಸಂಯೋಜನೆಗೆ ಈ ಕೆಳಕಂಡ ಅಂಕಗಳ ಮಾನದಂಡಗಳನ್ನು ನಿಗದಿಗೊಳಿಸಲಾಗಿದೆ.

| ಕ್ರ.ಸಂ. | ಸಂಯೋಜನೆಯ ಪ್ರಕಾರಗಳು | ನಿಗಧಿಪಡಿಸಿದ ಕನಿಷ್ಠ ಸಂಯೋಜನಾ ಅಂಕಗಳು(%) (ರಿಯಾಯಿತಿ ನಂತರ) |
|---|---|---|
| 1 | **ಹೊಸ ಸಂಯೋಜನೆ** | **45** |
| 2 | ಸಂಯೋಜನೆಗಳ ನವೀಕರಣ/ಮುಂದುವರಿಕೆ/ವಿಸ್ತರಣೆ | **45** |
| 3 | ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ | **50** |
| 4 | ಹೊಸ ಕೋರ್ಸುಗಳ/ಹೊಸ ಕಾಂಬಿನೇಷನ್‌ಗಳ ಮಂಜೂರಾತಿ | **55** |
| 5 | **ಹೊಸ ಶಾಶ್ವತ ಸಂಯೋಜನೆ** | **60** |

5. ಸರ್ಕಾರದ ಆದೇಶದಲ್ಲಿ ಮಹಾವಿದ್ಯಾಲಯಗಳು ಹೊಂದಿರಬೇಕಾದ ಜಮೀನಿನ ವಿಸ್ತೀರ್ಣಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| | | |
|---|---|---|
| 1 | ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯ ಪ್ರದೇಶದಲ್ಲಿ | 0.5 ಎಕರೆ ವಿಸ್ತೀರ್ಣ |
| 2 | ಬಿ.ಎಂ.ಆರ್.ಡಿ.ಎ / ನಗರ ಪಾಲಿಕೆ ಮತ್ತು ಜಿಲ್ಲಾಡಳಿತ ಕೇಂದ್ರ ಸ್ಥಾನ ವ್ಯಾಪ್ತಿಯ ಪ್ರದೇಶದಲ್ಲಿ | 1.0 ಎಕರೆ ವಿಸ್ತೀರ್ಣ |
| 3 | ನಗರ ಸಭೆ / ತಾಲ್ಲೋಕು ಕೇಂದ್ರ ಸ್ಥಾನ ವ್ಯಾಪ್ತಿಯ ಪ್ರದೇಶದಲ್ಲಿ | 1.5 ಎಕರೆ ವಿಸ್ತೀರ್ಣ |
| 4 | ಬೆಂಗಳೂರು ಗ್ರಾಮೀಣ ವ್ಯಾಪ್ತಿಯ ಪ್ರದೇಶದಲ್ಲಿ | 3.0 ಎಕರೆ ವಿಸ್ತೀರ್ಣ |
| **ಸೂ: ಮಹಾವಿದ್ಯಾಲಯಗಳು ಮೇಲೆ ಸೂಚಿಸಿದ ವಿಸ್ತೀರ್ಣ ಜಮೀನು ಹೊಂದಿರುವ ಕುರಿತು ಭೂ ದಾಖಲೆಗಳನ್ನು ಒದಗಿಸತಕ್ಕದ್ದು.** | | |

6. 2025-26ರ ಸಂಯೋಜನೆಗೆ ಸಂಬಂಧಪಟ್ಟಂತೆ, ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯಗಳು ಸಂಯೋಜನಾ ಪ್ರಕ್ರಿಯೆಯನ್ನು ನಡೆಸಿ, ಶಿಫಾರಸ್ಸುಗಳನ್ನು ಆನ್‌ಲೈನ್ ಮುಖಾಂತರ ಸರ್ಕಾರಕ್ಕೆ ಕಳುಹಿಸಬೇಕಾಗಿದೆ.

(I) ಒಂದು ಬಾರಿಯ ಕ್ರಮವಾಗಿ ಸಂಯೋಜನಾ ಅಂಕ (Affiliation Score) ಗಳಲ್ಲಿ ಶೇ.5% ರಷ್ಟು ಅಂಕಗಳ ರಿಯಾಯಿತಿ ನೀಡಿ, ಮೇಲಿನ 4ನೇ ಕಂಡಿಕೆಯ ಪಟ್ಟಿಯಲ್ಲಿ ನೀಡಿರುವಂತೆ ಸಂಯೋಜನಾ ಅಂಕಗಳ ಆಧಾರದ ಮೇಲೆ ಶಿಫಾರಸ್ಸು ಮಾಡುವುದು.

(II) ಈ ಹಿಂದಿನ ವರ್ಷಗಳಲ್ಲಿ ಸಂಯೋಜನೆಯಾಗಿರುವ ಕಾಲೇಜುಗಳು, ಪ್ರಸಕ್ತ ಸಾಲಿನಲ್ಲಿ ವ್ಯಾಖ್ಯಾನಿಸಲಾದ ಮಾನದಂಡಗಳ (Defined parameters) 8 ಅಂಶಗಳನ್ನು ಪೂರ್ಣಗೊಳಿಸದೆ ಇದ್ದರೆ, ಮುಂದಿನ 2 ವರ್ಷಗಳಲ್ಲಿ Defined parameters ಗಳನ್ನು ಪೂರ್ಣಗೊಳಿಸುವ ನಿಬಂಧನೆಗೆ ಒಳಪಡಿಸಿ ಸಂಯೋಜನೆಯನ್ನು ನೀಡಬಹುದು ಹಾಗೂ ಸದರಿ ಕಾಲೇಜುಗಳಿಗೆ ಯಾವುದೇ ಹೊಸ ಕೋರ್ಸು / ವಿಷಯಗಳನ್ನು ನೀಡತಕ್ಕದ್ದಲ್ಲ.

(III) 2025-26ನೇ ಶೈಕ್ಷಣಿಕ ವರ್ಷದಿಂದ ರಾಜ್ಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಿರುವ ಹಿನ್ನಲೆಯಲ್ಲಿ ವಿಷಯ ಸಮೂಹಗಳಿಗೆ ಸಂಯೋಜನೆ ನೀಡಬೇಕಾಗುತ್ತದೆ. ಹಾಗಾಗಿ ವಿಶ್ವವಿದ್ಯಾನಿಲಯಗಳು ಮುಂದುವರಿಕೆ ಅಥವಾ ಹೊಸ ಸಂಯೋಜನೆಗಳನ್ನು ಆಯಾ ಕೋರ್ಸಿನ ವಿಷಯ ಸಮೂಹಗಳಿಗೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಬೇಕಾಗುತ್ತದೆ.

ವಿವಿಧ ಸ್ಥಳೀಯ ವಿಚಾರಣಾ ಸಮಿತಿಗಳು ತಮಗೆ ವಹಿಸಲಾದ ಕಾಲೇಜುಗಳಿಗೆ ಭೌತಿಕವಾಗಿ ಭೇಟಿ ನೀಡಿ, ತನಿಖೆ ನಡೆಸಿ ವರದಿಗಳನ್ನು ಆನ್-ಲೈನ್ ಮುಖಾಂತರ ಹಾಗೂ ಸಹಿ ಮಾಡಿದ ಮುದ್ರಿತ ಪ್ರತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

2024–25ನೇ ಸಾಲಿನ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಹೊಂದಿದೆ ಕಾಲೇಜುಗಳಲ್ಲಿ ವಿವಿಧ ಪ್ರಕಾರದ ಮಹಾವಿದ್ಯಾಲಯಗಳ ವಿವರ

| Affiliated Colleges | General | SC/ST Colleges | Women's Colleges | Minority Colleges | Evening college | Total |
|---|---|---|---|---|---|---|
| Aided Colleges | 22 | 01 | 02 | 04(W.Colleges-02) | 03 | 32 |
| Un-Aided | 99 | 06 | 05 | 23(W-03 Eve-03) | 15 | 148 |
| Government Colleges | 11 | – | 01 | – | – | 12 |
| Aided (B.Ed) Colleges | 06 | – | – | 01 | – | 07 |
| Un-Aided (B.Ed) Colleges | 13 | 01 | – | 03 | – | 18 |
| Physical Education Colleges | | | | 01 | | 01 |
| | 151 | 08 | 08 | 32 | 18 | 217 |

(Mangalore Institute of International College has not applied for renewal of affiliation in time so it is not included in the online portal)

| | |
|---|---|
| 2024–25ನೇ ಶೈಕ್ಷಣಿಕ ವರ್ಷಕ್ಕೆ ಸಂಯೋಜಿತಗೊಂಡಿರುವ ಕಾಲೇಜುಗಳ ಒಟ್ಟು ಸಂಖ್ಯೆ | 217 |
| 2025–26ನೇ ಶೈಕ್ಷಣಿಕ ವರ್ಷಕ್ಕೆ ಅರ್ಜಿ ಸಲ್ಲಿಸಿರುವ ಕಾಲೇಜಿನ ಸಂಯೋಜಿತ ಕಾಲೇಜುಗಳ ಒಟ್ಟು ಸಂಖ್ಯೆ | 209 |
| 2025–26ನೇ ಶೈಕ್ಷಣಿಕ ವರ್ಷಕ್ಕೆ ಹೊಸ ಸಂಯೋಜನೆ/ಕಾಲೇಜುಗಳಿಗೆ ಅರ್ಜಿ ಸಲ್ಲಿಸಿರುವ ಒಟ್ಟು ಸಂಖ್ಯೆ | 01 |
| 2024–25ನೇ ಶೈಕ್ಷಣಿಕ ವರ್ಷಕ್ಕೆ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ: ಒಟ್ಟು ಸಂಖ್ಯೆ | 07 |
| 2025–26ನೇ ಶೈಕ್ಷಣಿಕ ವರ್ಷಕ್ಕೆ ಅರ್ಜಿ ಸಲ್ಲಿಸದೇ ಇರುವ ಸಂಯೋಜಿತ ಕಾಲೇಜುಗಳ ಒಟ್ಟು ಸಂಖ್ಯೆ | 08 |

**Existing Colleges 209 + 01 New Colleges Affiliation Sought**

| ಕ್ರ.ಸಂ | ಕಾಲೇಜುಗಳು | ಅರ್ಜಿ ಸಲ್ಲಿಸಿರುವ ಒಟ್ಟು ಕಾಲೇಜುಗಳ ಸಂಖ್ಯೆ: |
|---|---|---|
| 1 | ಅಸ್ತಿತ್ವದಲ್ಲಿರುವ ಕಾಲೇಜುಗಳ ಕೋರ್ಸ್/ ಕಾಂಬಿನೇಷನ್/ ವಿಷಯಗಳ ಸಂಯೋಜನೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ ಒಟ್ಟು ಕಾಲೇಜುಗಳ ಸಂಖ್ಯೆ<br>ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಸಂಸ್ಥೆಗಳ ಸಂಖ್ಯೆ | 209<br>01<br>210 |
| 2 | 2025–26ನೇ ಶೈಕ್ಷಣಿಕ ವರ್ಷಕ್ಕೆ ತಾತ್ಕಾಲಿಕ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿರುವ ಒಟ್ಟು ಕಾಲೇಜುಗಳ ಸಂಖ್ಯೆ | 209 |
| 3 | ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿ ಪ್ರಮಾಣ ಹೆಚ್ಚಳ | 15 |
| 4 | ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿ ಪ್ರಮಾಣ ಕಡಿಮೆಗೊಳಿಸುವುದು | 08 |
| 5 | ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಕೋರ್ಸ್‌ಗಳು/ವಿಷಯಗಳನ್ನು ಪ್ರಾರಂಭಿಸಲು ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 31 |

| | | |
|---|---|---|
| 6 | ಹೊಸ ಶಾಶ್ವತ ಸಂಯೋಜನೆಗಾಗಿ ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 02 |
| 7 | ಶಾಶ್ವತ ಸಂಯೋಜನೆಯ ವಿಸ್ತರಿಸುವಿಕೆಗೆ ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 03 |
| 8 | ಹಾಲಿ ಇರುವ ಕಾಲೇಜುಗಳಲ್ಲಿನ ಕೋರ್ಸ್‌ಗಳ ಮುಚ್ಚುವಿಕೆ ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 17 |
| 9 | ಹಾಲಿ ಇರುವ ಕಾಲೇಜುಗಳಲ್ಲಿನ ಹೆಸರು/ವಿಳಾಸ ಬದಲಾವಣೆಯ ವರದಿಗಳನ್ನು ಪರಿಗಣಿಸಬೇಕಾದ ಕಾಲೇಜುಗಳ ಸಂಖ್ಯೆ | 01 |
| 10 | ಹಾಲಿ ಇರುವ ಸ್ವಾಯತ್ತ ಕಾಲೇಜುಗಳ ಸಂಖ್ಯೆ | 09 |
| 11 | ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಸಲ್ಲಿಸಿದ ವರದಿಗಳನ್ನು ಪರಿಗಣಿಸಬೇಕಾದ ಸಂಸ್ಥೆಗಳ ಸಂಖ್ಯೆ | 01 |
| 12 | ಅರ್ಜಿ ಸಲ್ಲಿಸದೇ ಇರುವ ಹಾಲಿ ಕಾಲೇಜುಗಳ ಸಂಖ್ಯೆ | 01 |

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ ಅನುಚ್ಛೇಧ 59(8)ರ ಪ್ರಕಾರ 22 ಸ್ಥಳೀಯ ವಿಚಾರಣಾ ಸಮಿತಿಗಳ ಶಿಫಾರಸ್ಸುಗಳನ್ನು ದಿನಾಂಕ 25.03.2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲಾಗಿದ್ದು, ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಒದಗಿಸಲಾಯಿತು.

2025–26ನೇ ಸಾಲಿನ ಮಹಾವಿದ್ಯಾಲಯಗಳ ಸಂಯೋಜನೆಗೆ ಸಂಬಂಧಿಸಿದ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ವಿವರಣೆ:**

ಕುಲಪತಿಗಳು ವಿವರ ನೀಡಿ, ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣಾ ಸಮಿತಿಗಳ ಅಧ್ಯಕ್ಷರನ್ನಾಗಿ ನೇಮಿಸಿ 22 ಸಮಿತಿಗಳನ್ನು ರಚಿಸಲಾಗಿದೆ. ಅಧಿನಿಯಮ ಪ್ರಕಾರ ಪ್ರತಿಯೊಂದು ಸಮಿತಿಯಲ್ಲಿ ಒಬ್ಬರು ಪರಿಶಿಷ್ಟ ಜಾತಿ / ಪಂಗಡದ ಸದಸ್ಯರು ಇರುವುದು ಕಡ್ಡಾಯವಾಗಿದೆ. ಅಗತ್ಯ ಸಂಖ್ಯೆಯ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಹಿಂದಿನ ಸಿಂಡಿಕೇಟ್ ಸಭೆ ಕುಲಪತಿಗಳಿಗೆ ನೀಡಿದ ಅಧಿಕಾರನ್ವಯ ಸಮಿತಿಗಳನ್ನು ರಚಿಸಲಾಗಿದೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೇವಲ 10 ಜನ ಅಧ್ಯಾಪಕರಿದ್ದು, ಈ ಸಮಿತಿಗಳ ರಚನೆಗೆ ಅನಿವಾರ್ಯವಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಅಧ್ಯಾಪಕರನ್ನು ಅವಲಂಬಿಸಬೇಕಾಗಿದೆ, ಅವರಿಂದ ಒಪ್ಪಿಗೆ ಪಡೆದು ನಂತರ ಸಮಿತಿ ರಚಿಸಿ ಅಧಿಸೂಚನೆ ಹೊರಡಿಸಬೇಕಾಗುತ್ತದೆ. ಈ ಪ್ರಕ್ರಿಯೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಇದಲ್ಲದೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 13 ವಿಧಾನ ಸಭಾ ಕ್ಷೇತ್ರಗಳಿದ್ದರೂ ಮಹಾವಿದ್ಯಾಲಯಗಳು ಸಮವಾಗಿ ಹರಡಿಕೊಂಡಿಲ್ಲ. ಯಲಹಂಕ ಬ್ಯಾಟರಾಯನಪುರ ಕ್ಷೇತ್ರದಲ್ಲಿ ಹೆಚ್ಚಿನ ಕಾಲೇಜುಗಳ ಇರುವುದರಿಂದ ಅವುಗಳನ್ನು ಸಮಿತಿಗಳಲ್ಲಿ ವಿಂಗಡಿಸಬೇಕಾಗುತ್ತದೆ. ಕಾಲಾವಕಾಶದ ಕೊರತೆ ಹಾಗೂ ಬೇರೆ ವಿಶ್ವವಿದ್ಯಾನಿಲಯ ಅಧ್ಯಾಪಕರ ಮೇಲಿನ ಅವಲಂಬನೆಯಿಂದಾಗಿ ಸಮಿತಿ ರಚನೆಯಲ್ಲಿ ಸಾಕಷ್ಟು ಸಮಯ ತಗಲಿದೆ ಎಂದು ಹೇಳಿದರು.

ಸದಸ್ಯರಾದ ಡಾ. ಚೈತ್ರ ಟಿ. ಎಂ. ರವರು ತಮಗೆ ವಹಿಸಲಾದ ಮಹಾವಿದ್ಯಾಲಯಗಳಲ್ಲಿ ವೇದಾತ್ಮ ಮಹಾವಿದ್ಯಾಲಯದ ಸಂಯೋಜನೆ ಮುಂದುವರಿಕೆಗೆ ಸಮಿತಿ ಶಿಫಾರಸ್ಸು ಮಾಡಿಲ್ಲ ಅದು "Recommended" ಎಂದು ತಪ್ಪಾಗಿ ಮುದ್ರಿತವಾಗಿದೆ ಎಂದು ತಿಳಿಸಿದರು. ಸದರಿ ಮಹಾವಿದ್ಯಾಲಯದಲ್ಲಿ ಯಾವುದೇ ಸೌಲಭ್ಯಗಳು ಇಲ್ಲದಿರುವುದನ್ನು ಸಮಿತಿಯ ಸದಸ್ಯರು ಪುರಸ್ಕರಿಸಿದ್ದಾರೆ. ಅಗತ್ಯವಾದ ಅಂಕಗಳ ಸಹ ಈ ಮಹಾವಿದ್ಯಾಲಯಕ್ಕೆ ದೊರಕಿರುವುದಿಲ್ಲ ಎಂದು ತಿಳಿಸಿದರು.

ಈ ಕುರಿತು ವರದಿಯ ಮುದ್ರಿತ ಪ್ರತಿ ಪರಿಶೀಲಿಸಿದಾಗ ಭಾಗ III ರಲ್ಲಿ Recommended / Not Recommended ಕುರಿತು ಏನನ್ನು ನಮೂದಿಸದೇ ಇರುವುದರಿಂದ Recommended ಮುದ್ರಣವಾಗಿದೆ. ಕೆಲವು ಸದಸ್ಯರು ಈ ಮಹಾವಿದ್ಯಾಲಯಕ್ಕೆ ಇನ್ನೊಂದು ಸಮಿತಿ ಕಳುಹಿಸಿ ವರದಿ ಪಡೆಯಬಹುದೆಂದು ಸಲಹೆ ನೀಡಿದರು. ಸಮಿತಿಯ ಅಧ್ಯಕ್ಷರಾದ ಡಾ. ಚೈತ್ರ ಟಿ. ಎಂ. ರವರು ಸಮಿತಿ ಕಾಲೇಜಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿರುವ ವಸ್ತು ಸ್ಥಿತಿಯನ್ನು ಗಮನಿಸಿ ವರದಿ ನೀಡಲಾಗಿದೆ ಎಂದು ಹೇಳಿದರು.

ಡಾ. ಎಲಿಝಬೆತ್ ಜಾಸ್ಮಿನ್ ರವರ ಅಧ್ಯಕ್ಷತೆಯ ಸಮಿತಿಯ ಸದಸ್ಯರಾದ ಡಾ. ಬಿ. ಎಲ್. ಮುರಳಿಧರ್ ರವರು Charan's Degree College ನಲ್ಲಿ B.Sc. FAD ಮತ್ತು B.Com (Aviation) ಕೋರ್ಸುಗಳ ಸಂಯೋಜನೆ ಮುಂದುವರಿಕೆಗಾಗಿ ತಮ್ಮ ಅಸಮ್ಮತಿ ವ್ಯಕ್ತಪಡಿಸಿ ನೀಡಿದ ಪತ್ರವನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಈ ಕುರಿತು ಸಮಿತಿಯ ಅಧ್ಯಕ್ಷರಾದ ಡಾ. ಎಲಿಝಬೆತ್ ಜಾಸ್ಮಿನ್ ರವರು ವಿವರಣೆ ನೀಡಿ Charan's Degree College ಹಲಸೂರಿನಂತಹ ಪ್ರದೇಶದಲ್ಲಿದ್ದು, ಕಳೆದ 9 ವರ್ಷದಿಂದ ಅಸ್ತಿತ್ವದಲ್ಲಿದೆ ಕಾಲೇಜಿನಲ್ಲಿರುವ ಶೈಕ್ಷಣಿಕ ಸೌಕರ್ಯಗಳು ಉತ್ತಮವಾಗಿ ಸುಮಾರು 500 ಜನ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು, 50% SC/ST / OBC ವಿದ್ಯಾರ್ಥಿಗಳಿದ್ದಾರೆ.

ಮಹಾವಿದ್ಯಾಲಯದಲ್ಲಿ B.Com/BBA/BCA Course ಗಳಿದ್ದು, 2023–24 ರಲ್ಲಿ ಹೊಸದಾಗಿ B.Sc. FAD BBA (Aviation Management) ಕೋರ್ಸುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ. B.Sc. (FAD) ಮತ್ತು BBA (Aviation Management) ಕೋರ್ಸುಗೆ ವಿಶಾಲವಾದ ಪ್ರಯೋಗಾಲಯ ಬೇಕಾಗಿರುವುದರಿಂದ ಕಾಲೇಜಿನಿಂದ 2 ಕಿ.ಮೀ ದೂರದ ಇನ್ನೊಂದು ಕಟ್ಟಡದಲ್ಲಿ ಪ್ರಯೋಗಾಲಯ ನಿರ್ಮಿಸಿದ್ದಾರೆ. ಮಾನ್ಯ ಸದಸ್ಯರಾದ ಡಾ. ಬಿ.ಎಲ್. ಮುರಳಿಧರ್ B.Sc. (FAD) ಮತ್ತು BBA (Aviation Management) ಪ್ರಯೋಗಾಲಯ ಬೇರೆ ಕಟ್ಟಡವನ್ನು ಇರುವುದನ್ನು ಗಮನಿಸಿ ಮುಂದುವರಿಕೆ ಸಂಯೋಜನೆ ತಿರಸ್ಕರಿಸಲು ಶಿಫಾರಸ್ಸು ಮಾಡಿದ್ದಾರೆ. LIC ಶಿಫಾರಸ್ಸುಗಳಿಗೆ ಅಸಮ್ಮತಿ ಸೂಚಿಸಿದ್ದಾರೆ. ಸಮಿತಿಯ 3 ಜನ ಸದಸ್ಯರಲ್ಲಿ ಇಬ್ಬರು ಶಿಫಾರಸ್ಸು ಮಾಡಿದ್ದು ಒಬ್ಬರು ಮಾಡಿರುವುದಿಲ್ಲವೆಂದು ತಿಳಿಸಿದರು.

ಸದಸ್ಯರಾದ ಡಾ. ಬಿ. ಆರ್. ಸುಪ್ರೀತ್‌ರವರು ಮಾತನಾಡಿ ಈ ಮಹಾವಿದ್ಯಾಲಯ ಬೇರೆ ಕಟ್ಟಡದಲ್ಲಿ ಪ್ರಯೋಗ ತರಗತಿಗಳನ್ನು ನಡೆಸುವ ಕುರಿತು ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆಯಬೇಕಾಗಿತ್ತು. ಈ ವಿಷಯವನ್ನು ಕುರಿತು ಮರು ಪರಿಶೀಲಿಸಿ ವರದಿ ಸಲ್ಲಿಸಲು ಒಂದು ಸಮಿತಿಯನ್ನು ರಚಿಸಿ ವರದಿ ಪಡೆಯಬಹುದೆಂದು ತಿಳಿಸಿದರು.

ಕುಲಪತಿಗಳು ವಿವರಣೆ ನೀಡಿ ಸದರಿ ಕಾಲೇಜು ಕಳೆದ 9 ವರ್ಷಗಳಿಂದ ಅಸ್ತಿತ್ವದಲ್ಲಿದ್ದು 2023–24ನೇ ಸಾಲಿಗೆ B.Sc. (FAD) ಮತ್ತು BBA (Aviation Management) ಕೋರ್ಸುಗಳಿಗೆ ಹೊಸ ಸಂಯೋಜನೆ ಪಡೆದಿರುತ್ತಾರೆ. ಸರ್ಕಾರದಿಂದ ಅನುಮತಿ ಪಡೆದು ಸಂಯೋಜನೆಯ ಅಧಿಸೂಚನೆ ಹೊರಡಿಸುವಲ್ಲಿ ವಿಳಂಬವಾದ್ದರಿಂದ ಕಳೆದ ವರ್ಷ ಪ್ರವೇಶವಾಗಿರುವುದಿಲ್ಲ. ಹೀಗಾಗಿ ಈ ಎರಡು ಕೋರ್ಸುಗಳ ಮುಂದುವರಿಕೆ ಸಂಯೋಜನೆ ಅಡಿಯಲ್ಲಿ ಬರುತ್ತದೆ. ವಿದ್ಯಾರ್ಥಿಗಳ ಭವಿಷ್ಯವನ್ನು ಪರಿಗಣಿಸಿ ತೀರ್ಮಾನಿಸಬೇಕಾಗುತ್ತದೆ. ಕಾರಣ ಅಸ್ತಿತ್ವದಲ್ಲಿರುವ 6 ಕೋರ್ಸುಗಳಲ್ಲಿ B.Com, BBA (General), BCA (General) ಮತ್ತು BBA (Aviation Management) ಕೋರ್ಸುಗಳ ಸಂಯೋಜನೆಯನ್ನು ಮುಂದುವರೆಸಿ, B.Sc. (FAD) ಕೋರ್ಸು ಕುರಿತಂತೆ ಈಗಿರುವ ಮಹಾವಿದ್ಯಾಲಯದ ಕಟ್ಟಡದಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸುವ ಸಾಧ್ಯತೆಯನ್ನು ಪರಿಶೀಲಿಸಲು ಆ ರೀತಿಯ ಸಾಧ್ಯತೆ ಇಲ್ಲವಾದಲ್ಲಿ ಬೇರೆ ಕಟ್ಟಡದಲ್ಲಿ

ಪ್ರಯೋಗಾಲಯ ಹೊಂದುವ ಕುರಿತು ಅಗತ್ಯ ಶುಲ್ಕದೊಂದಿಗೆ ಮನವಿ ಸಲ್ಲಿಸಲು ಮಹಾವಿದ್ಯಾಲಯಕ್ಕೆ ಸೂಚಿಸಿ ನಂತರ ಈ ಕುರಿತು ಒಂದು ಸಮಿತಿಯನ್ನು ರಚಿಸಿ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಅಗತ್ಯ ಕ್ರಮಕೈಕೊಳ್ಳಬಹುದೆಂದು ತಿಳಿಸಿದರು.

*ಸಿಂಡಿಕೇಟ್ ತೀರ್ಮಾನ:*

2025–26ನೇ ಶೈಕ್ಷಣಿಕ ವರ್ಷದ ಮಹಾವಿದ್ಯಾಲಯಗಳ ಸಂಯೋಜನೆಗೆ ಸಂಬಂಧಿಸಿದಂತೆ, ರಚಿಸಲಾದ 22 ಸ್ಥಳೀಯ ವಿಚಾರಣಾ ಸಮಿತಿಗಳು ವರದಿಗಳ ಮೇಲೆ ವಿದ್ಯಾವಿಷಯಕ ಪರಿಷತ್ ಮಾಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಕೆಳಗೆ ನಮೂದಿಸಿದ 2 ಮಹಾವಿದ್ಯಾಲಯಗಳು ಹೊರತು ಪಡಿಸಿ ಉಳಿದ ಮಹಾವಿದ್ಯಾಲಯಗಳ ಶಿಫಾರಸ್ಸುಗಳಿಗೆ ಒಪ್ಪಿಗೆ ನೀಡಲು ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಲು ತೀರ್ಮಾನಿಸಿತು.

1) **Committee No.12 Chairman Dr. Chaitra T.M**

| ಕ್ರ.ಸಂ. | ಕಾಲೇಜು ಹೆಸರು | ಕೋರ್ಸ್ | ಸಿಂಡಿಕೇಟ್ ತೀರ್ಮಾನ |
|---|---|---|---|
| 1. | 117 ವೇದಾತ್ಮ ಕಾಲೇಜ್ ಆಫ್ ಡಿಸೈನ್, ಟೆಕ್ನಾಲಜಿ ಮತ್ತು ಮ್ಯಾನೇಜ್‌ಮೆಂಟ್ | **B.Sc. (CSME)**<br>**BVA (Animation & Game Art)** | ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಹಿನ್ನೆಲೆಯಲ್ಲಿ ಸದರಿ ಕಾಲೇಜಿಗೆ ಮುಂದುರಿಕೆ ಸಂಯೋಜನೆಯನ್ನು ನೀಡುವ ಕುರಿತಂತೆ ಮಹಾವಿದ್ಯಾಲಯ ಹೊಂದಿರುವ ಮೂಲಭೂತ ಸೌಕರ್ಯಗಳ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಒಂದು ಸಮಿತಿಯನ್ನು ರಚಿಸಿ ಅದರ ವರದಿಯ ಆಧಾರದ ಮೇಲೆ ಸೂಕ್ತ ಕ್ರಮಕೈಕೊಳ್ಳಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು. |
| 2. | 153 ಚರಣ್ಸ್ ಪದವಿ ಕಾಲೇಜು | **B.Com (General)**<br>**BBA (General)**<br>**BCA (General)**<br>**BBA (Aviation Management)**<br>**B.Sc. (FAD)** | ಸದರಿ ಮಹಾವಿದ್ಯಾಲಯದಲ್ಲಿರುವ **B.Com (General), BBA (General), BCA (General), BBA (Aviation Management)** ಕೋರ್ಸ್‌ಗಳ ಸಂಯೋಜನೆ ಯನ್ನು 2025–26ನೇ ಸಾಲಿಗೆ ಮುಂದುವರೆಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.<br><br>**B.Sc. (FAD)** ಕೋರ್ಸ್ ಕುರಿತಂತೆ ಈಗಿರುವ ಮಹಾವಿದ್ಯಾಲಯದ ಕಟ್ಟಡದಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸುವ ಸಾಧ್ಯತೆಯನ್ನು ಪರಿಶೀಲಿಸಲು ಆ ರೀತಿಯ ಸಾಧ್ಯತೆ ಇಲ್ಲವಾದಲ್ಲಿ ಬೇರೆ ಕಟ್ಟಡದಲ್ಲಿ ಪ್ರಯೋಗಾಲಯ ಹೊಂದುವ ಕುರಿತು ಅಗತ್ಯ ಶುಲ್ಕದೊಂದಿಗೆ ಮನವಿ ಸಲ್ಲಿಸಲು ಮಹಾವಿದ್ಯಾಲಯಕ್ಕೆ ಸೂಚಿಸಿ ನಂತರ ಈ ಕುರಿತು ಒಂದು ಸಮಿತಿಯನ್ನು ರಚಿಸಿ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಅಗತ್ಯ ಕ್ರಮಕೈಕೊಳ್ಳಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು. |

ವಿಷಯ ಸಂಖ್ಯೆ: 04

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಮಂಜೂರಾಗಿರುವ ಬೋಧಕೇತರ ಹುದ್ದೆಗಳ ಕುರಿತಂತೆ ರಚಿಸಲಾಗಿರುವ "Draft-Statutes Governing Cadre, Recruitment & Promotion of Non-Teaching, Technical & Ministerial Staff in the Benagluru City University" ಕರಡು ಪರಿನಿಯಮದ ಬಗ್ಗೆ.

***ಪರಾಮರ್ಶಕ ಟಿಪ್ಪಣಿ:***

ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: ಸಂವ್ಯಶಾಇ 30 ಶಾಸನ 2015, ಬೆಂಗಳೂರು ದಿನಾಂಕ: 13.08.2015 ರಂದು ಹೊರಡಿಸಲಾದ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಲಾದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ – 2015 ಪ್ರಕರಣ 7 ರಉಪಬಂಧ (2) ರಲ್ಲಿ ಮೂಲ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯಕ್ಕೆ ಸಂದರ್ಭನುಸಾರವಾಗಿ ಸಂಯೋಜಿಸಲಾದ ಸಂಯೋಜಿತ ಕಾಲೇಜುಗಳಿಗೆ ಅಥವಾ ಇತರ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗತಕ್ಕ, ಬೆಂಗಳೂರು ವಿಶ್ವವಿದ್ಯಾನಿಲಯವು ರಚಿಸಿದ ಎಲ್ಲ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯವು ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳೆಂದು ಭಾವಿಸತಕ್ಕದ್ದು ಮತ್ತು ಅವು ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯವು ಸಂದರ್ಭಾನುಸಾರವಾಗಿ ತನ್ನದೇ ಆದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳನ್ನು ರಚಿಸುವವರೆಗೆ ಹಾಗೆಯೇ ಮುಂದುವರಿಯತಕ್ಕದ್ದು ಎಂದು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಪ್ರಥಮ ಬಾರಿಗೆ ಪ್ರೊ. ಬಿ. ತಿಮ್ಮೇಗೌಡ ವಿಶ್ರಾಂತ ಕುಲಪತಿಗಳು ಅವರ ಅಧ್ಯಕ್ಷತೆಯಲ್ಲಿ ಪರಿನಿಯಮ ರಚನಾ ಸಮಿತಿಯನ್ನು ರಚಿಸಿ, ವಿಶ್ವವಿದ್ಯಾನಿಲಯದ ದೈನಂದಿನ ಆಡಳಿತಕ್ಕೆ ಅಗತ್ಯವಾದ 11 ಪರಿನಿಯಮಗಳನ್ನು ರಚಿಸಿ ಪ್ರಾಧಿಕಾರಗಳು ಅನುಮೋದನೆ ಪಡೆದು ದಿನಾಂಕ 30.01.2021ರಂದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಸರ್ಕಾರವು ದಿನಾಂಕ 23.03.2021 ರ ಪತ್ರದಲ್ಲಿ ಒಟ್ಟಾರೆಯಾಗಿ ಸಲ್ಲಿಸಿದ ಪರಿನಿಯಮಾವಳಿಗಳನ್ನು ಕುಲಾಧಿಪತಿಗಳ ಅನುಮೋದನೆಗೆ ಸಲ್ಲಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ, ಸಂದರ್ಭನುಸಾರ ಯುಜಿಸಿ ಪರಿನಿಯಮಗಳು ಅಥವಾ ಸರ್ಕಾರದ ಕಾರ್ಯ ನೀತಿಯ ಅನುರೂಪವಾಗಿ ಪ್ರತ್ಯೇಕ ಪರಿನಿಯಮಗಳನ್ನು ತ್ರಿಪ್ರತಿಯಲ್ಲಿ ಸಲ್ಲಿಸಲು ಸೂಚಿಸಿರುತ್ತಾರೆ.

ಸರ್ಕಾರದ ಸೂಚನೆಯಂತೆ ನಂತರದ ದಿನಗಳಲ್ಲಿ ಕೆಳಕಂಡ 3 ಪರಿನಿಯಮಗಳನ್ನು ಸಿದ್ಧಪಡಿಸಿ ಕುಲಾಧಿಪತಿಗಳ ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ.

| ಕ್ರ.ಸ | ಪರಿನಿಯಾಮವಳಿಗಳು | ಸಲ್ಲಿಸಲಾದ ದಿನಾಂಕ |
|---|---|---|
| 1 | DRAFT-Statutes relating to Appointment and Promotion of Teachers and Other Academic Staff and for Implementation of Revised UGC Pay Scales in Bengaluru City University. | 21.06.2023 |
| 2 | DRAFT-Statute Governing Holding of Convocations for Conferring Degrees of the Bengaluru City University. | ದಿನಾಂಕ 06.08.2021 |
| 3 | DRAFT-Statutes Governing Cadre, Recruitment and Promotion of Non-Teaching, Technical and Ministerial Staff in the Bengaluru City University. | ದಿನಾಂಕ 06.08.2021, 19.08.2022 ಮತ್ತು 06.10.2023. |

ಮೇಲಿನ 3 ಪರಿನಿಯಮಗಳಲ್ಲಿ 2 ಪರಿನಿಯಮಗಳಿಗೆ (ಕ್ರಮ ಸಂಖ್ಯೆ 1 & 2) ಕುಲಾಧಿಪತಿಗಳ ಅನುಮೋದನೆ ಪಡೆದು ಅಧಿಸೂಚನೆಯ ಮೂಲಕ ಪ್ರಕಟಿಸಲಾಗಿದೆ. 3ನೇ ಪರಿನಿಯಮವಾದ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪರಿನಿಯಮಾವಳಿ "Statutes Governing Cadre, Recruitment and Promotion of Non-Teaching, Technical and Ministerial Staff in the Bengaluru City University" ಕ್ಕೆ ಸಂಬಂಧಿಸಿದಂತೆ, ಸರ್ಕಾರ ಕಳೆದ 4 ವರ್ಷದಲ್ಲಿ 3 ಬಾರಿ ಸಲಹೆ ಸೂಚನೆಗಳನ್ನು ನೀಡಿ ಮರಳಿಸಿದ್ದು, ಅಂತಿಮವಾಗಿ ನೇಮಕಾತಿ ಪ್ರಕ್ರಿಯೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ನಿರ್ವಹಿಸುವ ಕುರಿತು ಪರಿನಿಯಮಗಳಲ್ಲಿ ಅಳವಡಿಸಿಕೊಂಡು ಪ್ರಾಧಿಕಾರಗಳ ಅನುಮೋದನೆ ಪಡೆದು ಸಲ್ಲಿಸುವಂತೆ ಸೂಚಿಸಿರುತ್ತಾರೆ. ಅದರಂತೆ, ಡಾ. ಟಿ. ಡಿ. ಕೆಂಪರಾಜು, ವಿಶ್ರಾಂತ ಕುಲಪತಿಗಳು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 18.01.2025 ಮತ್ತು ದಿನಾಂಕ 20.02.2025 ಪರಿನಿಯಮಗಳ ರಚನಾ ಸಮಿತಿ ಸಭೆಯಲ್ಲಿ ದಿನಾಂಕ 20.02.2025 ರಂದು ಈ ಕೆಳಕಂಡ ಅಗತ್ಯ ಬದಲಾವಣೆಗಳನ್ನು ಮಾಡಿ ಸಲ್ಲಿಸಿರುತ್ತಾರೆ.

| Existing Statutes | | Draft New Statues | |
|---|---|---|---|
| Page No. | Existing Text | Page No. | Correction Made |
| 01 | Bengaluru City University | 01 | Bengaluru City University, Bengaluru |
| 01 | 2020 | 01 | 2025 |
| 05 | 8. **Direct recruitment and Method of Selection**<br>i) In respect of all Group-A and B Technical and Non-Technical posts, unless specified otherwise under the Method of Recruitment for the respective posts in the Schedules to these Statutes, shall be on the basis of percentage of total marks secured in the Competitive Examination and the marks secured in the interview.<br><br>ii) In respect of all Group-C Technical and Non-Technical posts, except for the posts of Stenographers, Typists and Drivers, on the basis of percentage of total marks secured in the Competitive Examination. There shall be no Viva Voce or Personality Test or Interview in respect of direct recruitment to any of the Group-C posts. | 04 | 8. **Direct recruitment and Method of Selection**<br><br>i) In respectof all Group-A and B Technical and Non-Technical posts, unless specified otherwise under the Method of Recruitment for the respective posts in the Schedule to this Statute, shall be on the basis of percentage of total marks secured in the Competitive Examination conducted by the University/ KEA (Karnataka Examination Authority) and the marks secured in the interview.<br><br>ii) In respect of all Group-C Technical and Non-Technical posts, except for the posts of Stenographers, Typists and Drivers, on the basis of percentage of total marks secured in the Competitive Examination conducted by the University/ KEA (KarnatakaExamination Authority). There shall be no Viva Voce or Personality Test or Interview in respect of direct recruitment to any of the Group-C posts. |
| 07 | **8.1 Competitive Examination:**<br>(1) In respect of Group-A and B posts, the University shall conduct a Competitive Examination in the following manner, namely:- | 05 | **8.1. Competitive Examination:**<br>(1) In respect of Group-A and B posts, the University /KEA shall conduct a Competitive Examination in the following manner, namely:- |
| 08 | **Nil** | 06 | **Interview:** The selection authority shall conduct the interview for the candidates listed in order of merit in respect of Category A and Category B. The selection Authority after the completion of interview of competitive examination or after announcement of marks of competitive examination shall prepare and notify the list of candidates eligible for interview in respect of Group-A and Group –B posts observing the reservation policy of |

| | | | |
|---|---|---|---|
| | | | the state in 1: 4 ratio.<br>The maximum marks for interview shall be 5 % of total marks prescribed for competitive examination subject to maximum of 25 marks.<br>The interview marks for shall be awarded on the basis of performance in interview on the following areas:<br>a) Comprehensive knowledge about the nature of job performance;<br>b) Knowledge of computer and its application;<br>c) General comprehension;<br>d) Social inclusiveness;<br>e) Other traits with a bearing on job contents including experience. |
| 09 | **9. Appointment by Promotion**<br>**Nil** | 07 | **9. Appointment by Promotion**<br>(2) If eligible candidates /officials belongs to Schedule Castes/Schedule Tribes who have put in a minimum services 5 (five) years are not available for considering for promotion, the candidates/ officials who have put in 3 (three) years of service shall be considered for promotion (G.O.No.DPAR 1982 Dated 26.11.1982) and such other orders issued by the Govt. from time to time. |
| 10 | **9.1 Foregoing Promotion:**<br>**Nil** | 07 | **9.1 Foregoing Promotion:**<br>(4) Promotions are governed by Karnataka State Civil Service (Regulations of promotion, pay and Pension) Act 1993 and its amendments made from time to time. |
| 10 | **10. Age Limit For Appointments**<br>**Nil** | 08 | **10. Age Limit For Appointments**<br>h) Any change in prescription of age for apply is as per rules issued by the government from time to time. |
| 16-23 | **6th Pay Scale** | 12-19 | **New 7th Pay Scales updated** |

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಬೋಧಕೇತರ ಹುದ್ದೆಗಳ ವೃಂದ ಹಾಗೂ ನೇಮಕಾತಿ ಪರಿನಿಯಮ 2025 (Draft - Statutes Governing Cadre, Recruitment & Promotion of Non-Teaching, Technical & Ministerial Staff in the Bengaluru City University 2025) ಅನ್ನು ದಿನಾಂಕ: 25-03-2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಲಾಗಿದ್ದು, ಸದರಿ ಸಭೆಯ ಶಿಫಾರಸ್ಸುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 41(2) ರಅಡಿಯಲ್ಲಿ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ಸಿಂಡಿಕೇಟ್ ತೀರ್ಮಾನ:*

ವಿದ್ಯಾವಿಷಯಕ ಪರಿಷತ್ ಶಿಫಾರಸ್ಸು ಮಾಡಿರುವ **"Draft-Statutes Governing Cadre, Recruitment & Promotion of Non-Teaching, Technical & Ministerial Staff in the Benagluru City University"**ಗಳ ಪರಿನಿಯಮಗಳಿಗೆ ಸರ್ವಾನುಮತದ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

**ವಿಷಯ ಸಂಖ್ಯೆ: 05**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರಿನಿಯಮಗಳು 2025

***ಪರಮಾರ್ಶಕ ಟಿಪ್ಪಣಿ:***

ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: ಸಂವ್ಯಶಾಇ 30 ಶಾಸನ 2015, ಬೆಂಗಳೂರು ದಿನಾಂಕ: 13.08.2015 ರಂದು ಹೊರಡಿಸಲಾದ ವಿಶೇಷ ರಾಜ್ಯ ಪತ್ರಿಕೆಯ ಪ್ರಕರಣ 7ರ ಉಪಬಂಧ (2) ರಲ್ಲಿ ಮೂಲ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯಕ್ಕೆ ಸಂದರ್ಭನುಸಾರವಾಗಿ ಸಂಯೋಜಿಸಲಾದ ಸಂಯೋಜಿತ ಕಾಲೇಜುಗಳಿಗೆ ಅಥವಾ ಇತರ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗತಕ್ಕ, ಬೆಂಗಳೂರು ವಿಶ್ವವಿದ್ಯಾನಿಲಯವು ರಚಿಸಿದ ಎಲ್ಲ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯವು ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳೆಂದು ಭಾವಿಸತಕ್ಕದ್ದು ಮತ್ತು ಅವು ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯವು ಸಂದರ್ಭಾನುಸಾರವಾಗಿ ತನ್ನದೇ ಆದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳನ್ನು ರಚಿಸುವವರೆಗೆ ಹಾಗೆಯೇ ಮುಂದುವರಿಯತಕ್ಕದ್ದು ಎಂದು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಪ್ರಥಮ ಬಾರಿಗೆ ಪ್ರೊ. ಬಿ. ತಿಮ್ಮೇಗೌಡ ವಿಶ್ರಾಂತ ಕುಲಪತಿಗಳ ಅಧ್ಯಕ್ಷತೆಯಲ್ಲಿ ಪರಿನಿಯಮಗಳ ರಚನಾ ಸಮಿತಿಯನ್ನು ರಚಿಸಿ, ವಿಶ್ವವಿದ್ಯಾನಿಲಯದ ದೈನಂದಿನ ಆಡಳಿತಕ್ಕೆ ಅಗತ್ಯವಾದ 11 ಪರಿನಿಯಮಗಳನ್ನು ರಚಿಸಿ ಪ್ರಾಧಿಕಾರಗಳು ಅನುಮೋದನೆ ಪಡೆದು ದಿನಾಂಕ 30.01.2021 ರಂದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಸರ್ಕಾರವು ದಿನಾಂಕ 23.03.2021 ರ ಪತ್ರದಲ್ಲಿ ಒಟ್ಟಾರೆಯಾಗಿ ಸಲ್ಲಿಸಿದ ಪರಿನಿಯಮಾವಳಿಗಳನ್ನು ಮಾನ್ಯ ಕುಲಾಧಿಪತಿಗಳ ಅನುಮೋದನೆಗೆ ಸಲ್ಲಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ, ಸಂದರ್ಭನುಸಾರ ಯುಜಿಸಿ ಪರಿನಿಯಮಗಳು ಅಥವಾ ಸರ್ಕಾರದ ಕಾರ್ಯ ನೀತಿಯ ಅನುರೂಪವಾಗಿ ಪ್ರತ್ಯೇಕ ಪರಿನಿಯಮಗಳನ್ನು ತ್ರಿಪ್ರತಿಯಲ್ಲಿ ಸಲ್ಲಿಸಲು ಸೂಚಿಸಿರುತ್ತಾರೆ.

ಸರ್ಕಾರದ ಸೂಚನೆಯಂತೆ, ಡಾ. ಟಿ. ಡಿ. ಕೆಂಪರಾಜು, ವಿಶ್ರಾಂತ ಕುಲಪತಿಗಳು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 18.01.2025 ರಂದು ಜರುಗಿದ ಪರಿನಿಯಮಗಳ ರಚನಾ ಸಮಿತಿ ಸಭೆಯಲ್ಲಿ ಈ ಕೆಳಕಂಡ 7 ಪರಿನಿಯಮಗಳನ್ನು ಸೂಕ್ತ ತಿದ್ದುಪಡಿಗಳೊಂದಿಗೆ ಸಿದ್ಧಪಡಿಸಿ ಸಲ್ಲಿಸಿರುತ್ತದೆ. ಸದರಿ ಪರಿನಿಯಮಗಳನ್ನು ದಿನಾಂಕ: 24-03-2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಿ ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಒದಗಿಸಲಾಯಿತು.

1. Draft - Statutes Governing Appointment, Powers, Functions and Responsibilities of the Officers of the Bengaluru City University, 2025.
2. Draft -Statutes Governing the Institution of Endowments for Award of Gold Medals, Prizes, Fellowships, Scholarships Endowment Lectures and Academic Chairs the Bengaluru City University, 2025.
3. Draft -Statutes Governing Award of Honorary Degrees or Academic Distinctions by the Bengaluru City University at the Annual Convocations, 2025.
4. Draft -Statutes Governing Constitution, Meetings, Powers and Functions of Various Authorities of the Bengaluru City University, 2025.
5. Draft -Statutes Governing Seniority of teachers of the Bengaluru City University, 2025.

6. Draft -Statutes Governing the Affiliation of Colleges/ Institutions under the Jurisdiction of the Bengaluru City University 2025.
7. Draft -Statutes Governing Establishment of New Post-Graduate Departments of Studies and Institution of Teaching Posts for the New and Existing Post-Graduate Departments of Studies in the Bengaluru City University, 2025.

ಮೇಲಿನ 07 ಪರಿನಿಯಮಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 41(2)ರ ಅಡಿಯಲ್ಲಿ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ವಿದ್ಯಾವಿಷಯಕ ಪರಿಷತ್ ಶಿಫಾರಸ್ಸು ಮಾಡಿರುವ ಏಳು ಪರಿನಿಯಮಗಳಿಗೆ ಸರ್ವಾನುಮತದ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 06**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ವಾಯತ್ತ ಮಹಾವಿದ್ಯಾಲಯಗಳಿಗೆ (ಮಾನ್ಯತೆ ನಿರ್ವಹಣೆ ಹಾಗೂ ನಿಯಂತ್ರಣ) ಪರಿನಿಯಮ 2025

***ಪರಮಾರ್ಶಕ ಟಿಪ್ಪಣಿ:***

ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: ಸಂವ್ಯಶಾಇ 30 ಶಾಸನ 2015, ಬೆಂಗಳೂರು ದಿನಾಂಕ: 13.08.2015 ರಂದು ಹೊರಡಿಸಲಾದ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಲಾದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ– 2015ರ ಪ್ರಕರಣ 7 ರಉಪಬಂಧ (2) ರಲ್ಲಿ ಮೂಲ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯಕ್ಕೆ ಸಂದರ್ಭಾನುಸಾರವಾಗಿ ಸಂಯೋಜಿಸಲಾದ ಸಂಯೋಜಿತ ಕಾಲೇಜುಗಳಿಗೆ ಅಥವಾ ಇತರ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗತಕ್ಕ, ಬೆಂಗಳೂರು ವಿಶ್ವವಿದ್ಯಾನಿಲಯವು ರಚಿಸಿದ ಎಲ್ಲ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯವು ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳೆಂದು ಭಾವಿಸತಕ್ಕದ್ದು ಮತ್ತು ಅವು ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯವು ಸಂದರ್ಭಾನುಸಾರವಾಗಿ ತನ್ನದೇ ಆದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳನ್ನು ರಚಿಸುವವರೆಗೆ ಹಾಗೆಯೇ ಮುಂದುವರಿಯತಕ್ಕದ್ದು ಎಂದು ತಿಳಿಸಿರುತ್ತಾರೆ.

ಸ್ವಾಯತ್ತ ಮಹಾವಿದ್ಯಾಲಯಗಳ ಕುರಿತಂತೆ, ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ 2023ರಲ್ಲಿ ಪರಿಷ್ಕೃತ ನಿಯಮಾವಳಿಗಳನ್ನು ಜಾರಿಗೊಳಿಸಿರುವುದನ್ನು ಪರಿಗಣಿಸಿ ಹಾಗೂ ಈ ವಿಶ್ವವಿದ್ಯಾನಿಲಯ ತನ್ನದೇ ಆದ ಪರಿನಿಯಮಗಳನ್ನು ರಚಿಸಿಕೊಳ್ಳುವ ಅಗತ್ಯತೆಯನ್ನು ಮನಗೊಂಡು ದಿನಾಂಕ: 18.01.2025 ಮತ್ತು ದಿನಾಂಕ 20.02.2025 ರಂದು ಜರುಗಿದ ಡಾ. ಟಿ. ಡಿ. ಕೆಂಪರಾಜು ಅವರ ಅಧ್ಯಕ್ಷತೆಯಲ್ಲಿ ಪರಿನಿಯಮಗಳ ರಚನಾ ಸಮಿತಿ ಕರಡು ಪರಿನಿಯಮಗಳನ್ನು ರಚಿಸಿ ಸಲ್ಲಿಸಿರುತ್ತದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕರಡು ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮ 2025 (Draft - Statutes relating to Autonomous Colleges, Institutions and Units of Bengaluru City University- 2025) ಅನ್ನು ದಿನಾಂಕ: 25–03–2025 ರಂದು ಜರುಗಲಿರುವ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಲಾಗಿದ್ದು, ಸದರಿ ಸಭೆಯ ಶಿಫಾರಸ್ಸುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 41(2)ರ ಅಡಿಯಲ್ಲಿ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ವಿವರಣೆ:**

ಸದಸ್ಯರಾದ ಡಾ. ಸುಪ್ರೀತ್‌ರವರು ಸ್ವಾಯತ್ತ ಸ್ಥಾನಮಾನವನ್ನು ಪಡೆದ ವಿದ್ಯಾಸಂಸ್ಥೆಗಳು ರಾಜ್ಯ ಸರ್ಕಾರದ ನಿಯಮಗಳಂತೆ ನೇಮಕಾತಿ ಹಾಗೂ ವಿದ್ಯಾರ್ಥಿಗಳ ಪ್ರವೇಶಗಳಲ್ಲಿ ರೋಸ್ಟರ್ ಅನುಸರಿಸುವ ಕುರಿತು ಪರಿನಿಯಮದಲ್ಲಿ ಉಲ್ಲೇಖಿಸಬೇಕೆಂದು ಅದನ್ನು ವಾರ್ಷಿಕ ಪರಿಶೀಲನಾ ಸಮಯದಲ್ಲಿ ಪರಿಶೀಲಿಸಬೇಕೆಂದು ಸಲಹೆ ಮಾಡಿದರು.

ಪರಿನಿಯಮ ರಚನಾ ಸಮಿತಿಯ ಸದಸ್ಯರಾದ ಶ್ರೀ ಕೃಷ್ಣ ರಾಮ್ ರವರು ಈ ಕುರಿತು ಅಗತ್ಯ ನಿಬಂಧನೆಗಳನ್ನು ಪರಿನಿಯಮದಲ್ಲಿ ಅಳವಡಿಸಲಾಗಿದೆ ಎಂದು ತಿಳಿಸಿದರು. ಸಮಿತಿಯ ಇನ್ನೊಬ್ಬ ಸದಸ್ಯರಾದ ಶ್ರೀ ಶಿವಕುಮಾರ್ ರವರು ವಿವರಣೆ ನೀಡಿ, UGC Regulationsಗಳ ಅನುಸಾರ ನಾವು ಪರಿನಿಯಮಗಳನ್ನು ರಚಿಸಬೇಕಾಗಿದೆ. ಅದಾಗ್ಯೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಉಲ್ಲೇಖಿಸಿ ಹಲವಾರು ನಿಯಂತ್ರಣ ಕ್ರಮಗಳನ್ನು ಪರಿನಿಯಮದಲ್ಲಿ ಅಳವಡಿಸಲಾಗಿದೆ. ಸ್ವಾಯತ್ತ ಮಹಾವಿದ್ಯಾಲಯಗಳು ಸರ್ಕಾರ ಹಾಗೂ ವಿಶ್ವವಿದ್ಯಾಲಯದ ಆದೇಶ/ ನಿರ್ದೇಶನಗಳನ್ನು ಪಾಲಿಸುವ ನಿಬಂಧನೆಗಳನ್ನು ಪರಿನಿಯಮದಲ್ಲಿ ಅಳವಡಿಸಲಾಗಿದೆ ಎಂದು ತಿಳಿಸಿದರು.

***ಸಿಂಡಿಕೇಟ್ ತೀರ್ಮಾನ:***

**ವಿದ್ಯಾವಿಷಯಕ ಪರಿಷತ್ ಶಿಫಾರಸ್ಸು ಮಾಡಿರುವ "STATUTES RELATING TO AUTONOMOUS COLLEGES, INSTITUTIONS AND UNITS OF BENGALURU CITY UNIVERSITY- 2025" ಪರಿನಿಯಮಗಳನ್ನು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದಿಸಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 07**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳ್ಳಪಡುವ ಕಾಲೇಜುಗಳಿಂದ ಸಂಯೋಜನಾ ಶುಲ್ಕಕ್ಕೆ ಅನ್ವಯವಾಗುವ ಜಿ.ಎಸ್.ಟಿ ಪಾವತಿಸದೇ ಇರುವ ಕುರಿತು, ವಾಣಿಜ್ಯ ತೆರಿಗೆ ಇಲಾಖೆಗಳಿಂದ Noticeಗಳನ್ನು ಸ್ವೀಕೃತವಾಗುತ್ತಿದ್ದು ಈ ಕುರಿತು ವಹಿಸಬೇಕಾದ ಕ್ರಮದ ಕುರಿತು:

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾಲಯದ ವ್ಯಾಪ್ತಿಗೊಳ್ಳಪಡುವ ಕಾಲೇಜುಗಳಿಂದ ಪಡೆಯುವ ಸಂಯೋಜನಾ ಶುಲ್ಕಕ್ಕೆ ಅನ್ವಯವಾಗುವ (Affliation fee) ಜಿ.ಎಸ್.ಟಿಯನ್ನು ಸರ್ಕಾರಕ್ಕೆ ಜಮೆ ಮಾಡದೇ ಇರುವುದನ್ನು ರಾಜ್ಯ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯು ಆಕ್ಷೇಪಣೆ ವ್ಯಕ್ತಪಡಿಸಿ ಪಾವತಿಸಲು ಸೂಚನೆ ನೀಡಿರುತ್ತದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳು ನೀಡುವ ಸಂಯೋಜನಾ ಶುಲ್ಕಕ್ಕೆ ಜಿ.ಎಸ್.ಟಿಯನ್ನು ಸರ್ಕಾರಕ್ಕೆ ಜಮೆ ಮಾಡದಿರುವ ಕುರಿತು ದಿನಾಂಕ:21.02.2023 ರಂದು Task force Committee inspection ಮಾಡಿ 2017–18ನೇ ಸಾಲಿಗೆ Notice ಜಾರಿ ಮಾಡಿರುತ್ತಾರೆ ಹಾಗೂ 28.11.2023 ದಿನಾಂಕದಂದು Adjudication orderನ್ನು ಪಾಸು ಮಾಡಲಾಗಿರುತ್ತದೆ. ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಸದರಿ Noticeಗೆ ಸಂಬಂಧಿಸಿದಂತೆ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ ತಡೆಯಾಜ್ಞೆ ಪಡೆಯಲಾಗಿರುತ್ತದೆ. ಪ್ರಸ್ತುತ 2017–18ನೇ ಸಾಲಿನ ಪ್ರಕರಣ ನ್ಯಾಯಾಲಯದಲ್ಲಿರುತ್ತದೆ.

ತದನಂತರದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ವತಿಯಿಂದ 2018–19 ರಿಂದ 2021–22 ರವರೆಗಿನ ವರ್ಷಗಳಿಗೂ Demand Notice ಜಾರಿ ಮಾಡಲಾಗಿರುತ್ತದೆ.

ಜಿ.ಎಸ್.ಟಿ ಸಂಬಂಧಿಸಿದಂತೆ ಕೆಳಕಂಡ ಎರಡು ಪ್ರಮುಖ ಸರ್ಕಾರಿ ನಿರ್ದೇಶನಗಳನ್ನು ಹೊರಡಿಸಲಾಗಿರುತ್ತದೆ.

I. GOI Clarification regarding applicability of GST on the service of affiliation provided by universities to colleges Date:11.10.2024

   ಮೇಲ್ಕಂಡ ಪತ್ರದಲ್ಲಿ ಭಾರತ ಸರ್ಕಾರದ, ಅರ್ಥಿಕ ಇಲಾಖೆ, ವಿಶ್ವವಿದ್ಯಾನಿಲಯಗಳ ಕಾಲೇಜುಗಳಿಗೆ ನೀಡಲಾಗುವ Affliation ಗಳಿಗಾಗಿ ವಸೂಲಿಸಲಾಗುವ ಶುಲ್ಕಕ್ಕೆ 18% GST ಅನ್ವಯಿಸುತ್ತದೆ ಎಂದು ಸ್ಪಷ್ಟನೆಯನ್ನು ನೀಡಲಾಗಿರುತ್ತದೆ.

II. Waiver of Interest or Penalty or both in respect of demands under section 73 of the GST act pertaining to Financial years 2017-18,2018-19 & 2019-20.

   ಮೇಲ್ಕಂಡ Circular No.238/32/2024 Dated 15.10.2024; 31.03.2025 ರೊಳಗೆ ಪಾವತಿಸಬೇಕಾಗಿರುವ GST demand ಗಳನ್ನು ಪಾವತಿಸಿದಲ್ಲಿ ಸದರಿ ಪಾವತಿಗೆ ಸಂಬಂಧಿಸಿದಂತಹ ಬಡ್ಡಿ ಹಾಗೂ Penalty ಯನ್ನು ರದ್ದು ಪಡಿಸುವುದಾಗಿ ತಿಳಿಸಲಾಗಿದೆ.

ಮೇಲ್ಕಂಡ ವಿಷಯವನ್ನು ದಿನಾಂಕ. 12.03.2025 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿ, ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತದೆ.

**ಹಣಕಾಸು ಸಮಿತಿಯ ತೀರ್ಮಾನ:**

**ಜಿ.ಎಸ್.ಟಿ ಕುರಿತಂತೆ ಈಗಾಗಲೇ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯಲ್ಲಿ ಪ್ರಸ್ತಾಪಿಸಲಾದ 2018–19ರ ಹಣಕಾಸು ವರ್ಷದ ಜೊತೆಗೆ ನಂತರದ ವರ್ಷಗಳನ್ನು ಸೇರಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಕುರಿತು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಭೆ ತೀರ್ಮಾನಿಸಿತು.**

ಹಣಕಾಸು ಸಮಿತಿಯ ಶಿಫಾರಸ್ಸು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಆದೇಶಕ್ಕಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಹಣಕಾಸು ಸಮಿತಿ ಶಿಫಾರಸ್ಸುಗಳನ್ನು ಅನುಮೋದಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 8**

ವಿಷಯ: 2024-25ನೇ ಸಾಲಿನಲ್ಲಿ ಒಟ್ಟಾರೆ ಆರು ಲೆಕ್ಕಶೀರ್ಷಿಗಳಿಗೆ ಹಂಚಿಕೆಯಾದ ಅನುದಾನದಲ್ಲಿ ರೂ.75.55 ಲಕ್ಷಗಳು ಕೊರತೆಯಾಗಿದ್ದು, ಇದನ್ನು ಇತರೆ ಲೆಕ್ಕಶೀರ್ಷಿಕೆಗಳಿಂದ ಮರುಹೊಂದಾಣಿಕೆಗೆ ಕ್ರಮವಹಿಸಲಾಗಿದ್ದು, ಸದರಿ ಕ್ರಮಕ್ಕೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ

***ಪರಾಮರ್ಶಕ ಟಿಪ್ಪಣಿ:***

2024-25ನೇ ಸಾಲಿನ ಆಯವ್ಯಯದ ಕೆಲವು ಲೆಕ್ಕಶೀರ್ಷಿಕೆಗಳಲ್ಲಿ ನಿಗದಿಪಡಿಸಿದ ಅನುದಾನ ವೆಚ್ಚವಾಗಿ ಅನುದಾನದ ಕೊರತೆ ಉಂಟಾಗಿರುತ್ತದೆ. ಈ ರೀತಿ ಕೊರತೆ ಉಂಟಾದ ಲೆಕ್ಕಶೀರ್ಷಿಕೆಗಳಲ್ಲಿನ ವೆಚ್ಚಗಳನ್ನು ಭರಿಸಲು ಸಂಬಂಧಿಸಿದ ಮುಖ್ಯ ಲೆಕ್ಕಶೀರ್ಷಿಕೆಯ ಸವಿವರ ಲೆಕ್ಕಶೀರ್ಷಿಕೆಗಳಲ್ಲಿ ಲಭ್ಯವಿರುವ ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಳ್ಳಲಾಗಿದ್ದು, ಸದರಿ ಕ್ರಮಕ್ಕೆ ಘಟನೋತ್ತರ ಅನುಮೋದನೆಯನ್ನು ಕೋರಿ ದಿನಾಂಕ.12.03.2025ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿ, ಸಭೆ ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತದೆ.

**ಹಣಕಾಸು ಸಮಿತಿಯ ತೀರ್ಮಾನ:**

**2024-25ನೇ ಸಾಲಿನ ಆಯವ್ಯಯದಲ್ಲಿ ರೂ.75.55 ಲಕ್ಷಗಳ ಮೊತ್ತದ ಮರುಹೊಂದಾಣಿಕೆಗಾಗಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲು ಹಣಕಾಸು ಸಮಿತಿ ಸರ್ವಾನುಮತದ ಅನುಮೋದನೆ ನೀಡಲು ತೀರ್ಮಾನಿಸಿತು.**

ಹಣಕಾಸು ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಹಣಕಾಸು ಸಮಿತಿಯ ಶಿಫಾರಸ್ಸು ಅನುಲಕ್ಷಿಸಿ 2024-25ನೇ ಸಾಲಿನ ಆಯವ್ಯಯದಲ್ಲಿ ಅಗತ್ಯಕ್ಕೆ ಅನುಗುಣವಾಗಿ ಕೆಲವು ಲೆಕ್ಕ ಶೀರ್ಷಿಕೆಗಳಿಂದ ಮರು ಹೊಂದಾಣಿಕೆ ಮಾಡಿದ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 9**

ವಿಷಯ: ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ತಾತ್ಕಾಲಿಕವಾಗಿ ವಿವಿಧ ಆಡಳಿತ/ವಿಭಾಗಗಳಲ್ಲಿ ಸಂಚಿತ ಸಂಭಾವನೆಯಲ್ಲಿ ಸೇವೆಯನ್ನು ಪಡೆಯುತ್ತಿರುವ ತಾತ್ಕಾಲಿಕ ನೌಕರರ ಸಂಭಾವನೆ ಹೆಚ್ಚಳ ಮಾಡುವ ಬಗ್ಗೆ.

ಉಲ್ಲೇಖ: 20.02.2025 ರಂದು ಜರುಗಿದ ತಾತ್ಕಾಲಿಕ ನೌಕರರ ಸಂಭಾವನೆ ಹೆಚ್ಚಳ ಕುರಿತು ರಚಿಸಲಾದ ಸಮಿತಿ ಸಭೆಯ ನಡವಳಿ.

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾನಿಲಯದಲ್ಲಿ ಕಳೆದ 01 ರಿಂದ 07 ವರ್ಷಗಳ ಅವಧಿಯಲ್ಲಿ ನೇಮಕಗೊಂಡು ವಿವಿಧ ವಿಭಾಗಗಳಲ್ಲಿ 73 ಸಂಖ್ಯೆಯ ಸಿಬ್ಬಂದಿಗಳು ಸೇವೆ ಸಲ್ಲಿಸಿರುತ್ತಾರೆ. ಈ ಸಿಬ್ಬಂದಿಗಳು ದಿನಾಂಕ: 13.09.2024 ರಂದು ಮನವಿ ಪತ್ರ ಸಲ್ಲಿಸಿರುತ್ತಾರೆ. ಬೆಂಗಳೂರು ನಗರದಾದ್ಯಂತ ಮಹಾನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವ

ಬೆಲೆ ಏರಿಕೆಯಿಂದಾಗಿ ಪ್ರಸ್ತುತ ಪಡೆಯುತ್ತಿರುವ ಸಂಭಾವನೆಯಲ್ಲಿ ಜೀವನ ನಿರ್ವಹಣೆ ಕಷ್ಟವಾಗಿದ್ದು, ತಮ್ಮಗಳ ಸಂಭಾವನೆಯನ್ನು ಹೆಚ್ಚಳ ಮಾಡುವಂತೆ ಕೋರಿರುತ್ತಾರೆ. ದಿನಾಂಕ: 18.09.2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಗುತ್ತಿಗೆ ಸಿಬ್ಬಂದಿಗಳ ವೇತನ ಹೆಚ್ಚಿಸುವ ಕುರಿತು ಪರಿಶೀಲಿಸಿ ಶಿಫಾರಸ್ಸು ಮಾಡಲು ಒಂದು ಉಪ ಸಮಿತಿಯನ್ನು ರಚಿಸಲು ತೀರ್ಮಾನಿಸಿರುವಂತೆ, ಮಾನ್ಯ ಕುಲಪತಿಗಳು ಉಪಸಮಿತಿಯನ್ನು ರಚಿಸಿರುತ್ತಾರೆ.

ಸಮಿತಿಯು ದಿನಾಂಕ: 20.02.2025 ರಂದು ನಡೆದ ಸಭೆಯಲ್ಲಿ ಈ ಕೆಳಕಂಡ ತಾತ್ಕಾಲಿಕ ಸಿಬ್ಬಂದಿಗಳ ಹೆಸರಿನ ಮುಂದೆ ನಮೂದಿಸಿರುವಂತೆ ಸಂಭಾವನೆಯನ್ನು ಹೆಚ್ಚಿಸಿ, ಉಳಿದ ತಾತ್ಕಾಲಿಕ ಸಿಬ್ಬಂದಿಗಳಿಗೆ ಅವರು ಪಡೆಯುತ್ತಿರುವ ಸಂಭಾವನೆ ಮೇಲೆ ಮಾಹೆಯಾನ ರೂ. 3,500/- ಅನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತದೆ.

| | | |
|---|---|---|
| 1. | ಶ್ರೀ. ಕೆ.ಜಿ. ದೇವರಾಜ್ | ರೂ. 30,000/- |
| 2. | ಶ್ರೀ. ಮೊಹಮ್ಮದ್ ಸಿಬಗತುಲ್ಲಾ | ರೂ. 30,000/- |
| 3. | ಶ್ರೀ ಮುರಳಿಕೃಷ್ಣ | ರೂ. 42,000/- |

ಸಮಿತಿಯ ಶಿಫಾರಸ್ಸಿನಂತೆ ಪ್ರತಿಯೊಬ್ಬ ತಾತ್ಕಾಲಿಕ ಸಿಬ್ಬಂದಿ ಪ್ರಸ್ತುತ ಪಡೆಯುತ್ತಿರುವ ಸಂಭಾವನೆ ಹಾಗೂ ಹೆಚ್ಚುವರಿಯಾದ ನಂತರ ಪಡೆಯುವ ಸಂಭಾವನೆಗಳ ವಿವರಗಳನ್ನು ಸಭೆ ಪರಿಶೀಲಿಸಿತು.

**ಈ ಪ್ರಸ್ತಾವನೆಗೆ ಅವಶ್ಯಕವಿರುವ ಅನುದಾನದ ವಿವರ.**

2024-25ರ ಆಯವ್ಯಯಗಳ ಲೆಕ್ಕಶೀರ್ಷಿಕೆ 4-09-022-065ರಲ್ಲಿ ನಿವೃತ್ತ ಅಧಿಕಾರಿ/ತಾತ್ಕಾಲಿಕ ನೌಕರರ ಸಂಭಾವನೆಗಾಗಿ ರೂ.600.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ. ಈ ಅನುದಾನದಲ್ಲಿ ಈಗಾಗಲೇ ನಿವೃತ್ತ ಅಧಿಕಾರಿ/ತಾತ್ಕಾಲಿಕ ನೌಕರರಿಗೆ ನೀಡಲಾಗಿರುವ ಸಂಭಾವನೆಯ ವೆಚ್ಚ ಹಾಗೂ ಸಮಿತಿಯು ಶಿಫಾರಸ್ಸಿನ ಮೇರೆಗೆ 2025-26ನೇ ಸಾಲಿನಿಂದ ಸಂಭಾವನೆ ಹೆಚ್ಚಳ ಮಾಡಿದಲ್ಲಿ ಆಗುವ ವೆಚ್ಚವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

2024-25 ರಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ - 600.00
(ನಿವೃತ ಅಧಿಕಾರಿ/ತಾತ್ಕಾಲಿಕ ನೌಕರರ ಸಂಭಾವನೆ)
ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಭರಿಸುತ್ತಿರುವ ವಾರ್ಷಿಕ ಅನುದಾನ - 223.70
ಸಂಭಾವನೆ ಹೆಚ್ಚಳದ ನಂತರ ಆಗುವ ವಾರ್ಷಿಕ ವೆಚ್ಚ (2025-26) - 254.66

ದಿನಾಂಕ: 20.02.2025 ರಂದು ತಾತ್ಕಾಲಿಕ ನೌಕರರು ಸಲ್ಲಿಸಿರುವ ಮನವಿಯ ಮೇರೆಗೆ ಹಾಗೂ ಸಮಿತಿಯು ಶಿಫಾರಸ್ಸು ಮಾಡಿರುವಂತೆ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ 73 ಸಿಬ್ಬಂದಿಗಳಿಗೆ ಸಂಭಾವನೆ ಹೆಚ್ಚಳ ಮಾಡುವ ಕುರಿತು ಸಿಂಡಿಕೇಟ್ ಪರಿಗಣನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

***ವಿವರಣೆ:***

ಸದಸ್ಯರಾದ ಡಾ. ಬಿ. ಆರ್. ಸುಪ್ರೀತ್ ರವರು ತಾತ್ಕಾಲಿಕ ಸಿಬ್ಬಂದಿಗಳ ಸಂಭಾವನೆಯನ್ನು ಹೆಚ್ಚಿಸಲು ರಚಿಸಲಾದ ಸಮಿತಿ ತನ್ನ ವಿವೇಚನೆಯಲ್ಲಿ ರೂ. 3,500/- ಗಳ ಪ್ರತಿ ಸಿಬ್ಬಂದಿಗೆ ಹೆಚ್ಚಿಸಲು ಶಿಫಾರಸ್ಸು ಮಾಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿ, ಪ್ರಸ್ತುತ ಸನ್ನಿವೇಶದಲ್ಲಿ ನೆಮ್ಮದಿಯ ಜೀವನ ನಡೆಸಲು ಮತ್ತು ತಾತ್ಕಾಲಿಕ ಸಿಬ್ಬಂದಿಗಳು ನಿರ್ವಹಿಸುತ್ತಿರುವ ಕೆಲಸದ ಗಾತ್ರವನ್ನು ಗಮನಿಸಿ, ಕನಿಷ್ಠ ರೂ. 5,000/- ಗಳನ್ನು ಪ್ರತಿ ಸಿಬ್ಬಂದಿಗೆ ಹೆಚ್ಚಿಗೆ ಮಾಡಬೇಕೆಂದು ತಿಳಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರು ಈ ಪ್ರಸ್ತಾಪಕ್ಕೆ ಒಪ್ಪಿಗೆ ಸೂಚಿಸಿ ಸಿಬ್ಬಂದಿಗಳು ನಿರ್ವಹಿಸುತ್ತಿರುವ ಕೆಲಸ ಪರಿಗಣಿಸಿ ರೂ. 5000/- ಹೆಚ್ಚಿಗೆ ಮಾಡಲು ಒಪ್ಪಿಗೆ ಸೂಚಿಸಿದರು.

***ಸಿಂಡಿಕೇಟ್ ತೀರ್ಮಾನ:***

ತಾತ್ಕಾಲಿಕ ಸಿಬ್ಬಂದಿಗಳ ಸಂಭಾವನೆ ಹೆಚ್ಚಿಸುವ ಕುರಿತು ರಚಿಸಲಾದ ಸಮಿತಿಯ ವರದಿಯನ್ನು ಪರಿಶೀಲಿಸಿ ಪ್ರತಿ ಸಿಬ್ಬಂದಿಗೆ ಮಾಹೆಯಾನ ರೂ.5,000/- (ರೂಪಾಯಿ ಐದು ಸಾವಿರ ಮಾತ್ರ) ಹೆಚ್ಚಿಸಲು ತೀರ್ಮಾನಿಸಿ ಉಳಿದಂತೆ ವರದಿಯನ್ನು ಒಪ್ಪಿಕೊಳ್ಳಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

**ವಿಷಯ ಸಂಖ್ಯೆ: 10**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ 161 ಬೋಧಕ ಹುದ್ದೆಗಳ ಪೈಕಿ ಮಿಕ್ಕುಳಿದ ಪೋಷಕ ವೃಂದ (Residual Parent Cadre) ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Local Cadre 371J) ನೇರ ನೇಮಕಾತಿ ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳನ್ನು ಸಮಾಜ ಕಲ್ಯಾಣ ಇಲಾಖೆ ನಿಗದಿಪಡಿಸಿರುವ ಕುರಿತು.

ಉಲ್ಲೇಖ: ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ. ಸಕನಿ/ ಮೀಜಾಕೋ-01/ಸಿಆರ್-9/23-24 ದಿನಾಂಕ. 12.02.2025

***ಪರಾಮರ್ಶಕ ಟಿಪ್ಪಣಿ:***

1. ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ, ಕರ್ನಾಟಕ ಸರ್ಕಾರದ ಆದೇಶ ಸಂ. ಇಡಿ 493 ಯುಬಿವಿ 2017 (ಭಾಗ-4) ದಿನಾಂಕ 07.11.2019 ಪ್ರಕಾರ 23 ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಮಂಜೂರಾದ ಒಟ್ಟು 161 ಹುದ್ದೆಗಳ ಪೈಕಿ ಮಿಕ್ಕುಳಿದ ಪೋಷಕ ವೃಂದ (Residual Parent Cadre) ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Local Cadre 371J) ನೇರ ನೇಮಕಾತಿ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಲು ಕೋರಿ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಈ ಕಛೇರಿ ಪತ್ರ ಸಂ. ಬೆಂನವಿ/ಸಿಬ್ಬಂದಿ/ ಬೋ.ಹು.ವಿ./ 2024-25 ದಿನಾಂಕ 25.01.2024 ಮತ್ತು ದಿನಾಂಕ 19.09.2024ರಲ್ಲಿ ವಿನಂತಿಸಲಾಗಿತ್ತು.

2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಉಲ್ಲೇಖದಲ್ಲಿ ನಮೂದಿಸಿದ ಪತ್ರದಲ್ಲಿ, ವಿಶ್ವವಿದ್ಯಾನಿಲಯದಿಂದ ಸ್ವೀಕರಿಸಲಾದ ಮಾಹಿತಿ/ದಾಖಲೆಗಳನ್ನು ಆಧರಿಸಿ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಉಳಿಕೆ ಮೂಲ ವೃಂದ (Residual Parent Cadre) ಹಾಗೂ ಕಲ್ಯಾಣ ಕರ್ನಾಟಕ ಕರ್ನಾಟಕ ಸ್ಥಳೀಯ ವೃಂದ (Local Cadre 371J) ಹುದ್ದೆಗಳ ನೇರ ನೇಮಕಾತಿಗೆ ಮೀಸಲಾತಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿ ಉಲ್ಲೇಖಿತ ಪತ್ರ ಹೊರಡಿಸಿರುತ್ತಾರೆ.

3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ನೀಡಿರುವ ಅನುಮತಿ ಪತ್ರದ ಪ್ರಕಾರ ಉಳಿಕೆ ಮೂಲ ವೃಂದದ ಅಡಿಯಲ್ಲಿ (Residual Parent Cadre) ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Local Cadre 371J) ಹುದ್ದೆಗಳನ್ನು ಪರಿಗಣಿಸಿ ನಿಗದಿ ಪಡಿಸಿರುವ ರೋಸ್ಟರ್ ವಿವರ ಕೆಳಗಿನಂತಿದೆ:

| ಕ್ರ.ಸಂ | ಪದನಾಮ | ಒಟ್ಟು ಹುದ್ದೆಗಳ ಸಂಖ್ಯೆ | ಉಳಿಕೆ ಮೂಲ ವೃಂದದ (Residual Parent Cadre) ಹುದ್ದೆಗಳ ಸಂಖ್ಯೆ | ಸ್ಥಳೀಯ ವೃಂದ (Local Cadre 371J) ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಪ್ರಾಧ್ಯಾಪಕರು | 23 | 21 | 02 |
| 2 | ಸಹ ಪ್ರಾಧ್ಯಾಪಕರು | 46 | 42 | 04 |

| | | | | |
|---|---|---|---|---|
| 3 | ಸಹಾಯಕ ಪ್ರಾಧ್ಯಾಪಕರು | 92 | 84 | 08 |
| | ಒಟ್ಟು | 161 | 147 | 14 |
| | ಮೇಲೆ ನಮೂದಿಸಿದ ಹುದ್ದೆಗಳ ಸಂಖ್ಯೆಗಳಿಗೆ ಸಮತಳ ಮತ್ತು ನೇರತಳ ಮೀಸಲಾತಿ ರೋಸ್ಟರ್ ಬಿಂದುಗಳನ್ನು ಲಗತ್ತಿಸಲಾದ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಪತ್ರದಲ್ಲಿ ನೀಡಲಾಗಿದೆ. | | | |

4. ಸಹಾಯಕ ಪ್ರಾಧ್ಯಾಪಕರು ಹುದ್ದೆಯ ಕಲ್ಯಾಣ ಕರ್ನಾಟಕ ಸ್ಥಳೀಯ (Local Cadre 371 J) ವೃಂದಕ್ಕೆ Botany, Chemistry, Commerce, English, Physics, Social Work, Sociology, ಮತ್ತುTechnology ವಿಷಯಗಳಲ್ಲಿ ತಲಾ 01 ಹುದ್ದೆಗಳನ್ನು ವರ್ಗೀಕರಣ ಮಾಡಿಕೊಂಡಿದ್ದು, ಈ ಹುದ್ದೆಗಳನ್ನು Single Post ಎಂದು ಪರಿಗಣಿಸಿ ಮೀಸಲಾತಿಯಿಂದ ವಿನಾಯ್ತಿ ನೀಡುವಂತೆ ಸಲ್ಲಿಸಿರುವ ಕೋರಿಕೆಗೆ ಸಂಬಂಧಿಸಿದಂತೆ ಕೆಳಗಿನಂತೆ ಅನುಮತಿ ನೀಡಿರುತ್ತಾರೆ.

   ಮೇಲ್ಕಂಡ ವಿಷಯವಾರು ವಿಭಾಗದಲ್ಲಿ (Subject Wise Depts.,) ಮುಂದಿನ ದಿನಗಳಲ್ಲಿ ಹೆಚ್ಚುವರಿ ಸಹಾಯಕ ಪ್ರಾಧ್ಯಾಪಕ ಹುದ್ದೆ ಮಂಜೂರಾದಲ್ಲಿ:

   a) ಈಗಾಗಲೇ 1ನೇ ಬಿಂದು ಎದುರಾಗಿ ಪ.ಜಾ (ಇತರೆ) ಅಭ್ಯರ್ಥಿಯನ್ನು ಪರಿಗಣಿಸಿದ್ದಲ್ಲಿ ನಿಯಮಾನುಸಾರ ರೋಸ್ಟರನ್ನು ಮುಂದುವರೆಸುವುದು ಅಂದರೆ, 2ನೇ ಬಿಂದುವಿಗೆ ಭವಿಷ್ಯದಲ್ಲಿ ಸಾಮಾನ್ಯ (ಇತರೆ) ಅಭ್ಯರ್ಥಿಯನ್ನು ಪರಿಗಣಿಸುವುದು

   b) ಈಗಾಗಲೇ 1ನೇ ಬಿಂದು ಎದುರಾಗಿ ಸಾಮಾನ್ಯ ಅಭ್ಯರ್ಥಿಯನ್ನು ಪರಿಗಣಿಸಿದ್ದಲ್ಲಿ 2ನೇ ಬಿಂದುವಿಗೆ ಭವಿಷ್ಯದಲ್ಲಿ ಪ.ಜಾ (ಇತರೆ) ಅಭ್ಯರ್ಥಿಯನ್ನು ಪರಿಗಣಿಸುವ ಮುಖೇನ ರೋಸ್ಟರನ್ನು ಚಾಲನೆಗೊಳಿಸುವುದು.

5. ಸರ್ಕಾರದ ಆದೇಶ ಸಂ. ಇಡಿ 493 ಯುಬಿವಿ 2017 (ಭಾಗ–4) ದಿನಾಂಕ 07.11.2019 ರಲ್ಲಿ 1–ಪ್ರಾಧ್ಯಾಪಕರು, 21–ಸಹ ಪ್ರಾದ್ಯಾಪಕರು ಮತ್ತು 37–ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇರ ನೇಮಕಾತಿಗಾಗಿ ಸರ್ಕಾರ ಅನುಮತಿ ನೀಡಿರುತ್ತದೆ. ಸದರಿ ನೇಮಕಾತಿಯ ಅನುಮತಿಯನ್ನು ಕೋವಿಡ್–19 ಕಾರಣದಿಂದಾಗಿ ಸ್ಥಗಿತಗೊಳಿಸಿ ನಂತರ ಸರ್ಕಾರದ ಪತ್ರ ಸಂ. ಇಡಿ 493 ಯುಬಿವಿ 2017 (ಭಾಗ–4) ದಿನಾಂಕ 01.12.2021 ದಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲು ಪುನ: ಅನುಮತಿ ನೀಡಿರುತ್ತಾರೆ.

6. ಬೋಧಕ ಹುದ್ದೆಗಳ ನೇಮಕಾತಿ ಕುರಿತಂತೆ ಯು.ಜಿ.ಸಿ. ನಿಯಮಾವಳಿ ಹಾಗೂ ಸರ್ಕಾರದ ಆದೇಶದ ಪ್ರಕಾರ Statute Relating to Appointment and Promotion of Teachers and other Academic Staff and Measures for Maintenance of Standards in Higher Education in the Bengaluru City University as per the UGC Regulations -2018 ಪರಿನಿಯಮಗಳನ್ನು ಕುಲಾಧಿಪತಿಗಳ ಅನುಮೋದನೆ ಪಡೆದು ದಿನಾಂಕ 24.1.2024ರಂದು ಅಧಿಸೂಚನೆ ಮೂಲಕ ಪ್ರಕಟಿಸಿ ಜಾರಿಯಲ್ಲಿ ತರಲಾಗಿದೆ.

7. ಮೇಲಿನ ಪರಿನಿಯಮನದ ಕ್ರ.ಸಂ. 7.0 ಪ್ರಕಾರ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಪ್ರವೇಶ ಪರೀಕ್ಷೆಗಳನ್ನು ಸರ್ಕಾರದ ನಿರ್ದೇಶನದ ಪ್ರಕಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ರಾಜ್ಯದ ಯಾವುದಾದರೂ ಒಂದು ವಿಶ್ವವಿದ್ಯಾಲಯದ ಮೂಲಕ ನಡೆಸಬಹುದೆಂದು ಅದರ ಆಧಾರದ ಮೇಲೆ ಸಂದರ್ಶನಕ್ಕೆ ಅಭ್ಯರ್ಥಿಗಳ ಪಟ್ಟಿಯನ್ನು ಪಡೆಯಲು ಸೂಚಿಸಲಾಗಿದೆ. ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರುಗಳ ಹುದ್ದೆಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಮಟ್ಟದಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸಬಹುದಾಗಿದೆ.

8. ಸರ್ಕಾರದ ಆದೇಶ ಸಂ. ಸಿ.ಆ.ಸು.ಇ./388/ಸನೆವಿ/ 2024 ದಿನಾಂಕ 25.11.2024 ಹಾಗೂ ಅನಧಿಕೃತ ಟಿಪ್ಪಣಿ ಸಂ. SWD/489/SLP/ 2024 ದಿನಾಂಕ 18.02.2025 ರಲ್ಲಿ ನೇಮಕಾತಿ ಪ್ರಾಧಿಕಾರಗಳು ಪರಿಶಿಷ್ಟ ಜಾತಿಯ ಒಳ ಮೀಸಲಾತಿ/ಉಪ ವರ್ಗೀಕರಣ ಪ್ರಕ್ರಿಯೆ ಕುರಿತಂತೆ ಸರ್ಕಾರದ ಆದೇಶವಾಗುವವರೆಗೆ ರಿಕ್ತ ಸ್ಥಾನಗಳನ್ನು ತುಂಬುವ ಬಗ್ಗೆ ಯಾವುದೇ ಅಧಿಸೂಚನೆಯನ್ನು ಹೊರಡಿಸಬಾರದು ಮತ್ತು ನೇಮಕಾತಿಯನ್ನು ಕೈಗೊಳ್ಳತಕ್ಕದ್ದಲ್ಲ ಎಂದು ತಿಳಿಸಲಾಗಿದೆ.

9. ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಮಂಜೂರಾದ 161 ಬೋಧಕ ಹುದ್ದೆಗಳ ಪೈಕಿ ಮಿಕ್ಕುಳಿದ ಪೋಷಕ ವೃಂದ (Residual Parent Cadre) ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Local Cadre 371J) ನೇರ ನೇಮಕಾತಿ ಹುದ್ದೆಗಳ ಕುರಿತಂತೆ ಸಮಾಜ ಕಲ್ಯಾಣ ಇಲಾಖೆ ನಿಗದಿಪಡಿಸಿರುವ ಮೀಸಲಾತಿ ರೋಸ್ಟರ್ ಬಿಂದುಗಳ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಮಾಹಿತಿಗಾಗಿ ಹಾಗೂ ಆದೇಶಕ್ಕಾಗಿ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ 161 ಬೋಧಕ ಹುದ್ದೆಗಳ ಪೈಕಿ ಮಿಕ್ಕುಳಿದ ಪೋಷಕ ವೃಂದ (Residual Parent Cadre) ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Local Cadre 371J) ನೇರ ನೇಮಕಾತಿ ಹುದ್ದೆಗಳಿಗೆ ಸಮಾಜ ಕಲ್ಯಾಣ ಇಲಾಖೆ ನಿಗದಿಪಡಿಸಿದ ಮೀಸಲಾತಿ ರೋಸ್ಟರ್ ಬಿಂದುಗಳನ್ನು ಗಮನಿಸಿ ಒಪ್ಪಿಗೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 11**

ವಿಷಯ: ಜುಲೈ/ಆಗಸ್ಟ್ 2024 ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ Malpractice ಮಾಡಿದ ವಿದ್ಯಾರ್ಥಿಗಳ ಮೇಲೆ ತೆಗೆದುಕೊಳ್ಳಲಾಗಿರುವ ಕ್ರಮದ ಬಗ್ಗೆ ಸಿಂಡಿಕೇಟ್ ಅನುಮೋದನೆ ಪಡೆಯುವ ಕುರಿತು.

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ 23 ಕಾಲೇಜುಗಳ ವಿದ್ಯಾರ್ಥಿಗಳು ಜುಲೈ/ಆಗಸ್ಟ್ 2024ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ Malpractice ಮಾಡಿರುವುದು ವಿಚಕ್ಷಣದಳ ಪತ್ತೆ ಮಾಡಿ ವರದಿ ಮಾಡಿರುತ್ತಾರೆ. ವಿಚಕ್ಷಣದಳ ಮಾಡಿರುವ ವರದಿಯನ್ನು Malpractice Enquiry Committee ಮುಂದೆ ಮಂಡಿಸಲಾಗಿತ್ತು. ಸಮಿತಿಯು ಕೂಲಂಕುಶವಾಗಿ ದೂರುಗಳನ್ನು ಪರಿಶೀಲಿಸಿ, ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಲಿಖಿತವಾಗಿ ಇ-ಮೇಲ್ ಮೂಲಕ ದೂರುಗಳ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯ/ಒಪ್ಪಿಗೆ ಕೋರಿ ಪತ್ರ ಕಳುಹಿಸಲಾಗಿತ್ತು. ಇದಕ್ಕೆ ಉತ್ತರವಾಗಿ 12 ವಿದ್ಯಾರ್ಥಿಗಳಲ್ಲಿ 09 ವಿದ್ಯಾರ್ಥಿಗಳು, ಅವರು ಮಾಡಿದ ತಪ್ಪನ್ನು ಒಪ್ಪಿಕೊಂಡು ಲಿಖಿತವಾಗಿ ಪತ್ರಗಳನ್ನು ಸಲ್ಲಿಸಿರುತ್ತಾರೆ ಹಾಗೂ ದಿನಾಂಕ 15.02.2025ರಂದು ನಡೆದ Malpractice Enquiry Committee ಸಭೆಯ ಮುಂದೆ ಹಾಜರಾಗಿರುತ್ತಾರೆ. ಇನ್ನುಳಿದ 03 ವಿದ್ಯಾರ್ಥಿಗಳು ಇ-ಮೇಲ್ ಮೂಲಕ ಕಳುಹಿಸಿರುವ ಪತ್ರಕ್ಕೆ ಉತ್ತರಿಸಿಲ್ಲ. ಹಾಗೂ ಗೈರು ಹಾಜರಾಗಿರುತ್ತಾರೆ. ಈ ಎಲ್ಲಾ ವಿವರಗಳನ್ನು ದಿನಾಂಕ 15.02.2025 ರಂದು ನಡೆದ Malpractice Enquiry Committee ಸಭೆಯು

ಪರಿಶೀಲಿಸಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ-2018 ರಲ್ಲಿ ಅಧ್ಯಾಯ 16 ರಲ್ಲಿನ Schedule of Penalties ಕ್ರಮ ಸಂಖ್ಯೆ 02ರಲ್ಲಿ ವಿವರಿಸಿರುವಂತೆ ದಂಡ ವಿಧಿಸಲು ಶಿಫಾರಸ್ಸು ಮಾಡಿರುತ್ತದೆ.

**ವಿಷಯ: ವಾಣಿಜ್ಯ ವಿಭಾಗ**

| Sl No | Degree | Student Details | Subject Details | Nature of Malpractice Committed by students | Students Reply for the charges Framed | Penalty imposed |
|---|---|---|---|---|---|---|
| 01 | B.Com 6th Semester | Prashanth S P Reg No:U18CZ21C1329 Government R.C.College of Commerce and Management College Code:3204 | *Subject Name: Advanced Financial Management QP Code*:DCBC603 | Micro Xerox & Writing the papers scripts 6 papers | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more examination with penalty of Rs. 5000/- |
| 02 | B.Com 6th Semester | Mohammed Ibrahim Reg No:U18CZ21C1419 Government R.C.College of Commerce and Management College Code:3204 | *Subject Name: Advanced Financial Management QP Code*: DCBC603 | Micro Xerox & Writing the papers scripts 6 papers | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more examination with penalty of Rs. 5000/- |
| 03 | B.Com 2nd Semester | Gowtham S Reg No:U18HV21C0059 Vijaya College,Jayanagar College Code:2414 | *Subject Name: Spoken English Open Elective QP Code*:OEEN211 | Micro Xerox & writing papers work 15 papers micro xerox and 10 papers scripts | Absent | To deny the benefit of performance of the examination for which the candidate has appeared and debar him/her two more examination with penalty of Rs. 10,000/- |
| 04 | B.Com 2nd Semester | V Sham David Reg No:U18BN23C0090 Bishop Cotton of College Yelahanka College Code:3409 | *Subject Name: Law and Practice of Banking QP Code*:DCBC204 | Micro Xerox | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more |

| | | | | | | |
|---|---|---|---|---|---|---|
| | | | | | | examination with penalty of Rs. 5000/- |
| 05 | B.Com 4th Semester | Munish Chandran V V Reg No:U18CM22C0064 Sheshadripuram First Grade College College Code:3425 | *Subject Name: Nutrition and Health QP Code*: OEBT311 | Micro Xerox | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more examination with penalty of Rs. 5000/- |
| 06 | B.B.A 6th Semester | Krishankanth Reg No:U18FY21M0079 Sambhram Academy of Management Studies College Code:3424 | *Subject Name: Human Resource Elective Compensation and Performance Management QP Code*:DEBB605 | Hand Written Chitts | Absent | To deny the benefit of performance of the examination for which the candidate has appeared and debar him/her two more examination with penalty of Rs. 10,000/- |
| 07 | B.B.A 6th Semester | Muhammed Sahal K Reg No:U18FY21M0093 Sambhram Academy of Management Studies College Code:3424 | *Subject Name: Human Resource Elective Compensation and Performance Management QP Code*:DEBB606 | Found many chits in his | Absent | To deny the benefit of performance of the examination for which the candidate has appeared and debar him/her two more examination with penalty of Rs. 10,000/- |

ವಿಷಯ: ವಿಜ್ಞಾನ ವಿಭಾಗ

| Sl No | Degree | Student Details | Subject Details | Nature of Malpractice Committed by students | Students Reply for the charges Framed | Penalty imposed |
|---|---|---|---|---|---|---|
| 01 | BCA 4thSemester | M.Tilak Narayan Naidu Reg No:U18EB22S0125 K.L.E.Degree College College Code:2805 | *Subject Name:* Internet Technologies *QP Code*:DCCA403 | Micro Xerox & Writing the papers scripts 15 papers | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more examination with penalty of Rs. 5000/- |

| | | | | | | |
|---|---|---|---|---|---|---|
| 02 | BCA $4^{th}$Semes Ter | Akash D C<br>Reg No:U18A022S0039<br>Aditya Institute of Management Studies Research<br>Code:3405 | *Subject Name: Design &Analusis of Alogorithm*<br>*QP Code*: DCCA402 | Micro Xerox & Writing the papers scripts 20 papers | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more examination with penalty of Rs. 5000/- |

ವಿಷಯ: ಕಲಾ ವಿಭಾಗ

| Sl No | Degree | Student Details | Subject Details | Nature of Malpractice Committed by students | Students Reply for the charges Framed | Penalty imposed |
|---|---|---|---|---|---|---|
| 01 | BA $6^{th}$ Semester | Srikanth M<br>Reg No:U18FQ21A0010<br>R.B.A.N.M.S.First Grade College<br>College Code:3215 | *Subject Name:*<br>Political Science<br>*QP Code*:DCPS603 | Had chits 4 micro xerox pieces with him | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more examination with penalty of Rs. 5000/- |
| 02 | BA $2^{nd}$ Semester | Jafin Shaik<br>Reg No:U18AQ23A0029<br>Al-Ameen Arts Science College<br>College Code:1802 | *Subject Name:*<br>Sociology of Rural Life in India<br>*QP Code*:DCSO202 | Caught by Flying Squad while Copying (Hand written slip.) | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more examination with penalty of Rs. 5000/- |
| 03 | BA $2^{nd}$ Semester | Madhan J<br>Reg No:U18AQ23A0017<br>Al-Ameen Arts Science College<br>College Code:1802 | *Subject Name:*<br>Sociology of Rural Life in India<br>*QP Code*: CSO202 | Caught by Flying Squad while Copying (Hand written slip.) | Accepted the charges in writing and before of the committee | To deny the benefit of performance of the Examination for which the candidate has appeared and debar him/her for one more examination with penalty of Rs. 5000/- |

Malpractice ವಿಚಾರಣಾ ಸಮಿತಿಯು ಮಾಡಿರುವ ಶಿಫಾರಸ್ಸನ್ನು ಪರಶೀಲನೆ ಮತ್ತು ಅನುಮೋದನೆಗಾಗಿ ಸಿಂಡಿಕೇಟ್‌ನ ಮುಂದೆ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಜುಲೈ/ಆಗಸ್ಟ್ 2024 ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ Malpractice ಮಾಡಿದ ವಿದ್ಯಾರ್ಥಿಗಳ ಮೇಲೆ ತೆಗೆದುಕೊಳ್ಳಲಾದ ಕ್ರಮಗಳಿಗೆ ಅನುಮೋದನೆ ನೀಡಲು ಹಾಗೂ ಶಿಕ್ಷೆಯ ಪ್ರಮಾಣವನ್ನು ಒಂದು ಪರೀಕ್ಷೆಗೆ ಸಿಮೀತಗೊಳಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 12**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ/ ಸ್ವಾಯತ್ತ ಕಾಲೇಜುಗಳನ್ನು ಸಂಶೋಧನಾ ಕೇಂದ್ರಗಳನ್ನಾಗಿ ಮಾನ್ಯತೆ ನೀಡುವ ಸಂಬಂಧ ಮತ್ತು ಈಗಾಗಲೇ ಮಾನ್ಯತೆ ಪಡೆದಿರುವ ಸಂಶೋಧನಾ ಕೇಂದ್ರಗಳಲ್ಲಿ ಹೊಸ ವಿಷಯಗಳಿಗೆ ಸಂಶೋಧನಾ ಮಾನ್ಯತೆ ನೀಡುವ ಸಂಬಂಧ ತಜ್ಞರ ಸಮಿತಿ ವರದಿಗಳನ್ನು ಅನುಮೋದಿಸುವ ಕುರಿತು

*ಪರಮಾರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನೋಟಿಫಿಕೇಷನ್ ನಂ.BCU/Ph.D/RRC-Fee/ 211/ 2023-24 ದಿನಾಂಕ 30.10.2023 ರನ್ವಯ ಸಂಯೋಜಿತ / ಸ್ವಾಯತ್ತ ಕಾಲೇಜುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಶೋದನಾ ಕೇಂದ್ರಗಳನ್ನಾಗಿ ಮಾನ್ಯತೆ ನೀಡಲು ಮತ್ತು ಈಗಾಗಲೆ ಮಾನ್ಯತೆ ಪಡೆದಿರುವ ಸಂಶೋಧನಾ ಕೇಂದ್ರಗಳಲ್ಲಿ ಹೊಸ ವಿಷಯಗಳಿಗೆ ಸಂಶೋಧನಾ ಮಾನ್ಯತೆ ನೀಡುವ ಸಂಬಂಧ ಅರ್ಜಿ ಸಲ್ಲಿಸಿದ್ದು ಅದರನ್ವಯ 03 ಸಂಸ್ಥೆಗಳಿಗೆ ತಜ್ಞರ ಸಮಿತಿ ಭೇಟಿ ನೀಡಿ ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಗಳನ್ವಯ ಅರ್ಹತಾ ಮಾನದಂಡಗಳನ್ನು ಪರಿಶೀಲಿಸಿ ವರದಿಗಳನ್ನು ಸಲ್ಲಿಸಲಾಗಿರುತ್ತದೆ. ಸದರಿ ವರದಿಗಳ ವಿವರಗಳು ಈ ಕೆಳಕಂಡತಿದೆ.

| Sl. No. | Name of the College | Subject | Date of Visit | Recommendations of the Committee |
|---|---|---|---|---|
| 1. | Indian Institute of Psychology and Research. #85, Madiwala Check Post, Bangalore-560095 | Psychology | 18.03.2025 | Recommended |
| 2. | SSMRV College. Jayanagar, Bangalore-560041 | Commerce | 18.03.2025 | Recommended |
| 3. | M.S.Ramaiah College of Arts, Science & Commerce | Commerce & Microbiology | 19.03.2025 | Recommended |

ತಜ್ಞರ ಸಮಿತಿಯ ಶಿಫಾರಸುಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಹಾಗೂ ಮುಂದಿನ ನಿಯಮಾನುಸಾರ ಕ್ರಮಕ್ಕಾಗಿ ಸಿಂಡಿಕೇಟ್‌ನ ಅನುಮೋದನೆಗಾಗಿ ಮಂಡಿಸಿದೆ.

*ಸಿಂಡಿಕೇಟ್ ತೀರ್ಮಾನ:*

ತಜ್ಞರ ಸಮಿತಿ ಶಿಫಾರಸ್ಸು ಮಾಡಿರುವ ಕೆಳಕಂಡ 3 ಮಹಾವಿದ್ಯಾಲಯಗಳ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

| Sl. No. | Name of the College | Subject | Date of Visit | Recommendations of the Committee |
|---|---|---|---|---|
| 1. | Indian Institute of Psychology and Research | Psychology | 18.03.2025 | Recommended |
| 2. | SSMRV College | Commerce | 18.03.2025 | Recommended |
| 3. | M.S.Ramaiah College of Arts, Science & Commerce | Commerce & Microbiology | 19.03.2025 | Recommended |

ವಿಷಯ ಸಂಖ್ಯೆ: 13

ವಿಷಯ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರಿಗೆ CAS ಅಡಿಯಲ್ಲಿ (ಶೈಕ್ಷಣಿಕ ಶ್ರೇಣಿ – 14) ರಿಂದ ಹಿರಿಯ ಪ್ರಾಧ್ಯಾಪಕರು (ಶೈಕ್ಷಣಿಕ ಶ್ರೇಣಿ – 15)ಕ್ಕೆ ಪದೋನ್ನತಿ ನೀಡುವ ಕುರಿತು ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳ ನೇಮಕಾತಿ ಹಾಗೂ ಪದೋನ್ನತಿ ಕುರಿತು ರಚಿಸಲಾದ "Statutes Relating to Appointment and promotion of Teachers and other Academic Staff and Measures for Maintenance of Standards in Higher Education in the Bengaluru City University, as per the UGC Regulations 2018" ಪರಿನಿಯಮಗಳನ್ನು ಕುಲಾಧಿಪತಿಗಳ ಅಂಕಿತ ಪಡೆದು ದಿನಾಂಕ. 26.01.2024 ರಂದು ಅಧಿಸೂಚನೆ ಮೂಲಕ ಪ್ರಕಟಿಸಲಾಗಿದೆ. ಸದರಿ ಪರಿನಿಯಮಗಳ ಪ್ರಕಾರ CAS ಪದೋನ್ನತಿ ಹೊಂದಲು ಅರ್ಹತೆ ಹೊಂದಿದ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಂದ ದಿನಾಂಕ. 23.12.2024 ರಂದು ಅಧಿಸೂಚನೆ ಹೊರಡಿಸಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ಅಧಿಸೂಚನೆಗೆ ಅನುಸಾರವಾಗಿ ಅರ್ಹ ಬೋಧಕರು ಅರ್ಜಿಗಳನ್ನು ದಾಖಲಾತಿಗಳೊಂದಿಗೆ ಸಲ್ಲಿಸಿರುತ್ತಾರೆ.

ಪರಿನಿಯಮದ ನಿಯಮ ಸಂ. 64 C(V) ಪ್ರಕಾರ ಪ್ರಾಧ್ಯಾಪಕರು (ಶೈಕ್ಷಣಿಕ ಶ್ರೇಣಿ–14) ರಿಂದ ಹಿರಿಯ ಪ್ರಾಧ್ಯಾಪಕ (ಶೈಕ್ಷಣಿಕ ಶ್ರೇಣಿ–15)ಕ್ಕೆ ಮುಂಬಡ್ತಿ ಪಡೆಯಲು ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

| | |
|---|---|
| 1. | Ten years experience as Professor |
| 2. | A minimum of ten publications in the Peer-Reviewed Refereed/ISSN or UGC-listed journals and Ph.D degree has been successfully awarded to two candidates under his/her supervision during the assessment period. |

ಕೆಳಗೆ ನಮೂದಿಸಿದ ಅಭ್ಯರ್ಥಿ ಅವರ ಹೆಸರಿನ ಮುಂದೆ ಕಾಲಂ 3ರಲ್ಲಿ ನಮೂದಿಸಿರುವ ದಿನಾಂಕದಂದು ಸಹ ಪ್ರಾಧ್ಯಾಪಕ ಶೈಕ್ಷಣಿಕ ಶ್ರೇಣಿ 13A ಯಿಂದ ಪ್ರಾಧ್ಯಾಪಕರು ಶೈಕ್ಷಣಿಕ ಶ್ರೇಣಿ 14ಕ್ಕೆ ಪದೋನ್ನತಿ ಹೊಂದಿರುತ್ತಾರೆ. ನಿಯಮಗಳ ಪ್ರಕಾರ ಕಾಲಂ 4ರಲ್ಲಿ ನಮೂದಿಸಿರುವ ದಿನಾಂಕದಂದು 10 ವರ್ಷಗಳ ಸೇವಾವಧಿ ಪೂರೈಸಿ ಹಿರಿಯ ಪ್ರಾಧ್ಯಾಪಕ (ಶೈಕ್ಷಣಿಕ ಶ್ರೇಣಿ–15)ಕ್ಕೆ ಪದೋನ್ನತಿ ಹೊಂದಲು ಅರ್ಹತೆ ಹೊಂದಿರುತ್ತಾರೆ.

| ಕ್ರ.ಸಂ | ಹೆಸರು | ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ಪಡೆದ ದಿನಾಂಕ | ಪ್ರಾಧ್ಯಾಪಕ ಹುದ್ದೆಯಲ್ಲಿ 10 ವರ್ಷ ಪೂರ್ಣಗೊಳಿಸಿದ ದಿನಾಂಕ |
|---|---|---|---|
| 1 | 2 | 3 | 4 |
| 1 | ಡಾ: ಕೆ. ಶಿವಶಂಕರ್<br>ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | 21.10.2014 | 21.10.2024 |

ಮೇಲ್ಕಂಡ ಪ್ರಾಧ್ಯಾಪಕರು (ಶೈಕ್ಷಣಿಕ ಶ್ರೇಣಿ – 14) ರಿಂದ ಹಿರಿಯ ಪ್ರಾಧ್ಯಾಪಕ (ಶೈಕ್ಷಣಿಕ ಶ್ರೇಣಿ – 15)ಕ್ಕೆ ಪದೋನ್ನತಿಗಾಗಿ ಸಲ್ಲಿಸಿದ ಅರ್ಜಿ ಹಾಗೂ ಅನುಬಂಧಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು 3 ಜನ ತಜ್ಞರಿಗೆ ಕಳುಹಿಸಲಾಗಿತ್ತು. ಸದರಿ ತಜ್ಞರು ನೀಡಿದ ವರದಿಗಳನ್ನು ನಿಯಮಾವಳಿಗಳ ಪ್ರಕಾರ ಪದೋನ್ನತಿಗಾಗಿ ರಚಿಸಲಾದ ಆಯ್ಕೆ ಸಮಿತಿಯ ದಿನಾಂಕ:24–03–2025ರಂದು ಜರುಗಿದ ಸಭೆಯಲ್ಲಿ ಮಂಡಿಸಲಾಗಿದ್ದು, ತಜ್ಞರ ವರದಿಗಳ ಮೇಲೆ ಸಮಿತಿ ಮಾಡಿದ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಯಿತು.

**ವಿವರಣೆ:**

ಸದಸ್ಯರಾದ ಡಾ. ಕೃಷ್ಣರಾಮ್ ರವರು ಮಾನ್ಯ ಕುಲಾಧಿಪತಿಗಳ ಕಛೇರಿಯಿಂದ ಹೊರಡಿಸಲಾದ ಸುತ್ತೋಲೆ ಸಂ.GS 13 GUM 2020-21 ದಿನಾಂಕ. 28.09.2021 ಪ್ರಸ್ತಾಪಿಸಿ ಅದರ ಪ್ರಕಾರ ಕುಲಪತಿಗಳ ಅಧಿಕಾರದ ಅವಧಿ 2 ತಿಂಗಳ ಬಾಕಿ ಇರುವಾಗ ಯವುದೇ ಪ್ರಮುಖ ನೀತಿ ನಿರ್ಧಾರಗಳನ್ನು (Major Policy Decision) ತೆಗೆದುಕೊಳ್ಳಬಾರದೆಂಬ ವಿಷಯವನ್ನು ಗಮನಕ್ಕೆ ತಂದರು.

ಕುಲಪತಿಗಳು ಮಾತನಾಡಿ, ಪ್ರಾಧ್ಯಾಪಕರ ಪದೋನ್ನತಿಗಾಗಿ ನಿಗದಿಪಡಿಸಿದ ಪರಿನಿಯಮಗಳ ಪ್ರಕಾರ ಅವರು ಅರ್ಹತೆ ಹೊಂದಿದ ದಿನಾಂಕದಿಂದ ಮುಂಬಡ್ತಿ ನೀಡುವುದು ದೈನಂದಿನ ಆಡಳಿತದ ಸಹಜ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಯಾವುದೇ ನೀತಿ ನಿರ್ಧಾರದ ವಿಷಯ ಅಡಗಿರುವುದಿಲ್ಲ ಹಾಗೂ ಸಿ.ಎ.ಎಸ್ ಪ್ರಕ್ರಿಯೆ ಕಳೆದ ಒಂದು ವರ್ಷದಿಂದ ಚಾಲ್ತಿಯಲ್ಲಿದ್ದು, ಪ್ರಸ್ತುತ ಸಿ.ಎ.ಎಸ್ ಪದೋನ್ನತಿ ಕುರಿತಂತೆ ಕೆಲಸ ಡಿಸಂಬರ್‌ನಲ್ಲಿ ಅಧಿಸೂಚನೆ ಹೊರಡಿಸಿ ನಿಯಮಾನುಸಾರ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಡಾ. ಎಚ್. ಕೃಷ್ಣ ರಾಮ್, ಶ್ರೀ ಕೆ. ಪಿ. ಪಾಟೀಲ್ ಮತ್ತು ಶ್ರೀಮತಿ ಶಿಲ್ಪಶ್ರೀ ರವರು ಇದು ನೀತಿ ನಿರ್ಧಾರದ ಸಂಬಂಧಿಸಿದ (Major Policy Decision) ವಿಷಯ ಎಂದು ತಿಳಿಸಿ ಇಂದಿನ ಸಭೆಯಲ್ಲಿ ಈ ವಿಷಯದ ಪರಿಗಣನೆಗೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು. ಮಾನ್ಯ ಕುಲಪತಿಗಳು ನಿಯಮಗಳ ಪ್ರಕಾರ ಲಿಖಿತ ರೂಪದಲ್ಲಿ ಅಸಮ್ಮತಿ ಪತ್ರ ಸಲ್ಲಿಸಲು ಸೂಚಿಸಿದರು. ಉಳಿದ ಸದಸ್ಯರು ಬೋಧಕ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ನೀಡಬೇಕಾದ CAS ಮುಂಬಡ್ತಿಯ ವಿಷಯ ಪ್ರಮುಖ ನೀತಿ ನಿರ್ಧಾರದ

ವಿಷಯವಾಗುವುದಿಲ್ಲವಾದರಿಂದ ಮುಂಬಡ್ತಿಯ ವಿಷಯ ಪರಿಗಣಿಸಬಹುದೆಂದು ಅಭಿಪ್ರಾಯಪಟ್ಟರು. ಶ್ರೀಮತಿ. ಆಯೇಷಾ ಫರ್ಜಾನಾ ಮತ್ತು ಡಾ. ಚೈತ್ರ ಟಿ. ಎಂ ರವರು ಈ ವಿಷಯ ನೀತಿ ನಿರ್ಧಾರದ ವಿಷಯವಾಗುವುದಿಲ್ಲವೆಂದು ಪರಿಗಣಿಸಿದಲ್ಲಿ ಪದೋನ್ನತಿ ನೀಡಬಹುದೆಂದು ತಿಳಿಸಿದರು.

*ಸಿಂಡಿಕೇಟ್ ತೀರ್ಮಾನ:*

**ರಸಾಯನಶಾಸ್ತ್ರ ವಿಷಯದ ಪ್ರಾಧ್ಯಾಪಕರಾದ ಡಾ. ಕೆ. ಶಿವಶಂಕರ್ ರವರಿಗೆ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 14 )ರಿಂದ ಹಿರಿಯ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 15)ಕ್ಕೆ ಪದೋನ್ನತಿಗಾಗಿ ಆಯ್ಕೆ ಸಮಿತಿ ಮಾಡಿರುವ ಶಿಫಾರಸ್ಸುಗಳನ್ನು ಪರಿಗಣಿಸಿ ಅವರಿಗೆ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 14) ರಿಂದ ಹಿರಿಯ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 15)ಕ್ಕೆ ಯು.ಜಿ.ಸಿ–ಸಿಎಎಸ್ ನಿಯಮಾವಳಿಗಳ ಪ್ರಕಾರ ಅವರ ಅರ್ಹತಾ ದಿನಾಂಕ 21.10.2024 ಅನ್ವಯಿಸಿ ಪದೋನ್ನತಿ ನೀಡಲು ಸಿಂಡಿಕೇಟ್ ಸಭೆ ಬಹುಮತದಿಂದ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 14**

ವಿಷಯ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ CAS ಅಡಿಯಲ್ಲಿ (ಶೈಕ್ಷಣಿಕ ಶ್ರೇಣಿ– 12) ರಿಂದ ಸಹ ಪ್ರಾಧ್ಯಾಪಕರು (ಶೈಕ್ಷಣಿಕ ಶ್ರೇಣಿ–13ಎ) ಹಂತದ ಪದೋನ್ನತಿಗಾಗಿ ರಚಿಸಲಾದ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳ ನೇಮಕಾತಿ ಹಾಗೂ ಪದೋನ್ನತಿ ಕುರಿತು ರಚಿಸಲಾದ "Statutes Relating to Appointment and promotion of Teachers and other Academic Staff and Measures for Maintenance of Standards in Higher Education in the Bengaluru City University, as per the UGC Regulations 2018" ಪರಿನಿಯಮಗಳನ್ನು ಕುಲಾಧಿಪತಿಗಳ ಅಂಕಿತ ಪಡೆದು ದಿನಾಂಕ. 26.01.2024 ರಂದು ಅಧಿಸೂಚನೆ ಮೂಲಕ ಪ್ರಕಟಿಸಲಾಗಿದೆ. ಸದರಿ ಪರಿನಿಯಮಗಳ ಪ್ರಕಾರ CAS ಪದೋನ್ನತಿ ಹೊಂದಲು ಅರ್ಹತೆ ಹೊಂದಿದ ವಿಶ್ವವಿದ್ಯಾನಿಲಯ ಬೋಧಕ ಸಿಬ್ಬಂದಿಗಳಿಂದ ದಿನಾಂಕ. 23.12.2024 ರಂದು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ಅಧಿಸೂಚನೆಗೆ ಅನುಸಾರವಾಗಿ ಅರ್ಹ ಬೋಧಕರು ಅರ್ಜಿಗಳನ್ನು ದಾಖಲಾತಿಗಳೊಂದಿಗೆ ಸಲ್ಲಿಸಿರುತ್ತಾರೆ.

ದಿನಾಂಕ 25.02.2025 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದ ಅನುಸಾರವಾಗಿ ವಿಶ್ವವಿದ್ಯಾನಿಲಯದ ಪರಿನಿಯಮ ಸಂ. 6.4 B (I), ಯು.ಜಿ.ಸಿ ಯವರ ದಿನಾಂಕ. 31.07.2023 ರ ಅಧಿಸೂಚನೆ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವರ ಪತ್ರದ ಪ್ರಕಾರ ಡಾ. ಟಿ. ಎನ್. ತಾಂಡವಗೌಡರವರಿಗೆ ಸಹಾಯಕ ಪ್ರಾಧ್ಯಾಪಕರು ಶೈಕ್ಷಣಿಕ ಶ್ರೇಣಿ 10 ರಿಂದ 11ಕ್ಕೆ ಅವರು ಅರ್ಹತೆ ಹೊಂದಿದ ದಿನಾಂಕವಾದ 30.11.2016 ರಿಂದ ಪೂರ್ವಾನ್ವಯಗೊಳಿಸಿ ಆದೇಶ ಸಂ.ಬೆಂನವಿ/ಸಿಬ್ಬಂದಿ/ವೃ.ಪ/492/2024–25 ದಿನಾಂಕ.01.03.2025 ಹೊರಡಿಸಲಾಗಿದೆ. ತತ್ಪರಿಣಾಮವಾಗಿ ಸಹಾಯಕ ಪ್ರಾಧ್ಯಾಪಕರು ಶೈಕ್ಷಣಿಕ ಶ್ರೇಣಿ 11 ರಲ್ಲಿ ಅವರು 5 ವರ್ಷಗಳ ಸೇವೆ ಪೂರೈಸಿದ ದಿನಾಂಕ. 30.11.2021ಕ್ಕೆ ಶೈಕ್ಷಣಿಕ ಶ್ರೇಣಿ 12ಕ್ಕೆ ಉಲ್ಲೇಖಿತ ಪರಿನಿಯಮದ ನಿಯಮ ಸಂ. 6.4 B (II) ಪ್ರಕಾರ ಅರ್ಹತೆ ಹೊಂದುವುದರಿಂದ ಸದರಿ ಪದೋನ್ನತಿ ನೀಡಿ

ಆದೇಶ ಸಂ.ಬೆಂನವಿ/ಸಿಬ್ಬಂದಿ/ವೃಪ/518(ಎ)/2024–25 ದಿನಾಂಕ.17.03.2025 ಹೊರಡಿಸಲಾಗಿದೆ. ಈ ಪದೋನ್ನತಿಗಳು ಕಾಲ್ಪನಿಕವಾಗಿದ್ದು, ಯಾವುದೇ ರೀತಿಯ ಹಣಕಾಸಿನ ಬಾಧ್ಯತೆಗೆ ಒಳಪಡುವದಿಲ್ಲ. ಆದೇಶ ಹೊರಡಿಸಿದ ದಿನಾಂಕದಿಂದ ಅವರು ವೇತನ ಸಂಬಂಧಿಸಿತ ಹಣಕಾಸಿನ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಮೇಲೆ ಉಲ್ಲೇಖಿಸಿ ಕ್ರಮ ನಿಯಮಾವಳಿ 6.4B (III) ಪ್ರಕಾರ ಸಹಾಯಕ ಪ್ರಾಧ್ಯಾಪಕರು ಶೈಕ್ಷಣಿಕ ಶ್ರೇಣಿ 12 ರಿಂದ ಸಹ ಪ್ರಾಧ್ಯಾಪಕ (ಶೈಕ್ಷಣಿಕ ಶ್ರೇಣಿ–13ಎ) ಹಂತಕ್ಕೆ ಪದೋನ್ನತಿ ಪಡೆಯಲು ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

| | |
|---|---|
| 1. | Assistant Professor who has completed three years of service in Academic Level 12/Selection-Grade. |
| 2. | A Ph.D degree in the subject relevant/allied/relevant discipline. |
| 3. | Any one of the following during the last three years: completed on e-course programme from amongst the categories of Refresher Courses / Methodology Workshops/ Syllabus Up-gradation Workshop / Teaching-Learining-Evaluation Technology Programme/Faculty Development Programme of at least two weeks (ten days) duration (or completed two courses of at least one week (five days) duration in lieu of every single course/programme of at least two weeks (ten days duration); or completed one MOOCs course (with e-certification); or contribution towards development of e-contents in 4-quadrant (at least one quadrant) minimum of 10 modules of a course /contribution towards development of at least 10 modules of MOOCs course/ contribution towards conduct of a MOOCs course during the period of assessment. |

ಈ ಕೆಳಗೆ ನಮೂದಿಸಿದ ಅಭ್ಯರ್ಥಿ ಅವರ ಹೆಸರಿನ ಮುಂದೆ ಕಾಲಂ 3ರಲ್ಲಿ ನಮೂದಿಸಿರುವ ದಿನಾಂಕಕ್ಕೆ ಸಹಾಯಕ–ಪ್ರಾಧ್ಯಾಪಕ ಶೈಕ್ಷಣಿಕ ಶ್ರೇಣಿ 12ಕ್ಕೆ ಪದೋನ್ನತಿ ಹೊಂದಿರುತ್ತಾರೆ. ಮೇಲೆ ನಮೂದಿಸಿದ ನಿಯಮಗಳ ಪ್ರಕಾರ ಕಾಲಂ 4ರಲ್ಲಿ ನಮೂದಿಸಿರುವ ದಿನಾಂಕದಂದು 3 ವರ್ಷಗಳ ಸೇವಾವಧಿ ಪೂರೈಸಿ ಸಹಾಯಕ ಪ್ರಾಧ್ಯಾಪಕ (ಶೈಕ್ಷಣಿಕ ಶ್ರೇಣಿ–12) ರಿಂದ ಸಹ ಪ್ರಾಧ್ಯಾಪಕ (ಶೈಕ್ಷಣಿಕ ಶ್ರೇಣಿ–13ಎ) ಹಂತಕ್ಕೆ ಪದೋನ್ನತಿ ಹೊಂದಲು ಅರ್ಹತೆ ಹೊಂದಿರುತ್ತಾರೆ.

| ಕ್ರ.ಸಂ | ಹೆಸರು | ಸಹಾಯಕ–ಪ್ರಾಧ್ಯಾಪಕ ಪದೋನ್ನತಿ ಶೈಕ್ಷಣಿಕ ಶ್ರೇಣಿ 12ಕ್ಕೆ ಪದೋನ್ನತಿ ದಿನಾಂಕ | ಸಹಾಯಕ–ಪ್ರಾಧ್ಯಾಪಕ ಶೈಕ್ಷಣಿಕ ಶ್ರೇಣಿ 12ರಲ್ಲಿ 03 ವರ್ಷ ಪೂರ್ಣಗೊಳಿಸಿದ ದಿನಾಂಕ |
|---|---|---|---|
| 1 | 2 | 3 | 4 |
| 1 | ಡಾ: ಟಿ. ಎನ್. ತಾಂಡವಗೌಡ<br>ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ | 30.11.2021 | 30.11.2024 |

ಮೇಲ್ಕಂಡ ಬೋಧಕರಿಗೆ ಸಹಾಯಕ ಪ್ರಾಧ್ಯಾಪಕರು (ಶೈಕ್ಷಣಿಕ ಶ್ರೇಣಿ–12) ರಿಂದ ಸಹ ಪ್ರಾಧ್ಯಾಪಕ (ಶೈಕ್ಷಣಿಕ ಹಂತ–13ಎ) ಹಂತಕ್ಕೆ ಪದೋನ್ನತಿ ನೀಡುವ ಸಲುವಾಗಿ ಕ್ರಮ ನಿಯಮಾವಳಿ 5.1 ಪ್ರಕಾರ ರಚಿಸಲಾದ ಆಯ್ಕೆ ಸಮಿತಿಯ ಸಭೆಯನ್ನು ದಿನಾಂಕ: 24.03.2025 ರಂದು ಜರುಗಿಸಲಾಗಿದ್ದು, ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಯಿತು.

*ಸಿಂಡಿಕೇಟ್ ತೀರ್ಮಾನ:*

ಆಂಗ್ಲ ವಿಷಯದ ಸಹಾಯಕ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 12)ರಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಟಿ.ಎನ್ ತಾಂಡವಗೌಡ ರವರಿಗೆ ಸಹ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 13ಎ) ಪದೋನ್ನತಿಗಾಗಿ ಸಂಬಂಧಿಸಿದ ಆಯ್ಕೆ ಸಮಿತಿ ಮಾಡಿರುವ ಶಿಫಾರಸ್ಸುಗಳನ್ನು ಪರಿಗಣಿಸಿ, ಅವರಿಗೆ ಸಹಾಯಕ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 12) ರಿಂದ ಸಹ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 13ಎ)ಗೆ ಯು.ಜಿ.ಸಿ–ಸಿ.ಎ.ಎಸ್ ನಿಯಮಾವಳಿಗಳ ಪ್ರಕಾರ ಅವರ ಅರ್ಹತೆಯ ದಿನಾಂಕ **30.11.2024** ರಿಂದ ಅನ್ವಯಿಸಿ ಪದೋನ್ನತಿ ನೀಡಲು ಸಿಂಡಿಕೇಟ್ ಸಭೆ ಬಹುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ: 15**

ವಿಷಯ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟು ಕಾರಣಾಂತರಗಳಿಂದ 2024–25ನೇ ಸಾಲಿಗೆ ಮುಂದುವರಿಕೆ/ಹೊಸ ಸಂಯೋಜನೆಗೆ ಅರ್ಜಿ ಸಲ್ಲಿಸದಿರುವ ಕಾಲೇಜು/ಸಂಸ್ಥೆಗಳಿಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಮತ್ತು ರಾಜ್ಯ ಸರ್ಕಾರದ ನಿರ್ದೇಶನದ ಪ್ರಕಾರ ರಚಿಸಲಾದ ಸ್ಥಳೀಯ ವಿಚಾರಣಾ ಸಮಿಯ ವರದಿಗಳನ್ನು ಪರಿಗಣಿಸುವ ಕುರಿತು

*ಪರಮಾರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿರುವ ಕೆಳಗೆ ನಮೂದಿಸಿರುವ 3 ಕಾಲೇಜು/ಸಂಸ್ಥೆಗಳು 2024–25ನೇ ಶೈಕ್ಷಣಿಕ ಸಾಲಿಗೆ ಮುಂದುವರಿಕೆಗೆ/ ಹೊಸ ಸಂಯೋಜನೆಗೆ ನಿಗಧಿತ ಸಮಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ನಂತರದಲ್ಲಿ ಸರ್ಕಾರದ ನಿರ್ದೇಶನದ ಮೇರೆಗೆ ಯು.ಯು.ಸಿ.ಎಂ.ಎಸ್ ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಿದಾಗ 1 ಮಹಾವಿದ್ಯಾನಿಲಯ ಹಾಗೂ 2 ಸಂಸ್ಥೆಗಳು 2024–25ನೇ ಸಾಲಿಗೆ ನಿಗಧಿತ ಶುಲ್ಕ ಪಾವತಿಸಿ ಆನ್‌ಲೈನ್‌ನಲ್ಲಿ ಮುಂದುವರಿಕೆಗೆ/ ಹೊಸ ಸಂಯೋಜನೆಗೆ ಅರ್ಜಿ ಸಲ್ಲಿಸಿರುತ್ತಾರೆ. ವಿವರಗಳು ಕೆಳಕಂಡಂತಿವೆ.

1. ಮಹಾವಿದ್ಯಾಲಯದ ಹೆಸರು: United Mission Degree College ,Sampangi Rama Nagar, Bengaluru.
   - ಕೋರ್ಸುಗಳು: ಬಿ.ಕಾಂ–100, ಬಿ.ಸಿ.ಎ–30,
   - ಸಂಯೋಜನೆ ಪ್ರಕಾರ: ತಾತ್ಕಾಲಿಕ ಸಂಯೋಜನೆ ಮುಂದುವರಿಕೆ.

**ವಿವರಣೆ:**

ಈ ಮಹಾವಿದ್ಯಾಲಯ ಪ್ರಾಂಶುಪಾಲರ ಸಮಸ್ಯೆಯಿಂದಾಗಿ ನಿಗಧಿತ ಸಮಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ತದನಂತರ ಸರ್ಕಾರ ಪೋರ್ಟಲ್ ತೆರೆಯಲು ಅವಕಾಶ ಕಲ್ಪಿಸಿದಾಗ ದಿನಾಂಕ: 09.08.2024 ರಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಮಹಾ ವಿದ್ಯಾಲಯದಲ್ಲಿ ಒಟ್ಟು 88 ಸಂಖ್ಯೆಯ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು, ಅವರು ಶಿಕ್ಷಣವನ್ನು ಮುಂದುವರೆಸಲು ಸಂಯೋಜನೆ ಮುಂದುವರೆಸುವ ಅಗತ್ಯತೆಯ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಮಹಾವಿದ್ಯಾಲಯಕ್ಕೆ 2024–25ನೇ ಸಾಲಿಗೆ UUCMS Portalನಲ್ಲಿ ಅರ್ಜಿ ಸಲ್ಲಿಸಲು ನೀಡಿರುವ ಅವಕಾಶದಂತೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಮಹಾವಿದ್ಯಾಲಯ ಮುಂದುವರಿಕೆ ಸಂಯೋಜನೆ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಸಿಂಡಿಕೇಟ್ ಸದಸ್ಯರಾದ ಡಾ. ಲಕ್ಷ್ಮಿ ನಾರಾಯಣ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸ್ಥಳೀಯ ವಿಚಾರಣಾ ಸಮಿತಿಗೆ ಈ ಮಹಾವಿದ್ಯಾಲಯದ ತನಿಖೆಯನ್ನು ವಹಿಸಲಾಗಿದೆ. ಸದರಿ ಸಮಿತಿ ದಿನಾಂಕ: 19.03.2025ರಂದು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ತಪಾಸಣೆ ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ. ಸ್ಥಳೀಯ

ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯಲ್ಲಿ United Mission Degree College, ಕಾಲೇಜಿಗೆ ಬಿ.ಕಾಂ ಕೋರ್ಸಿಗೆ ವಿದ್ಯಾರ್ಥಿ ಪ್ರಮಾಣ–100 ಮತ್ತು ಬಿ.ಸಿ.ಎ ಕೋರ್ಸಿಗೆ –30 ವಿದ್ಯಾರ್ಥಿ ಪ್ರಮಾಣದೊಂದಿಗೆ 2024–25ನೇ ಸಾಲಿಗೆ ಮುಂದುವರಿಕೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಿರುತ್ತದೆ.

2. ಮಹಾವಿದ್ಯಾಲಯದ ಹೆಸರು: EIMR Business School, Basavangudi, Bengaluru.

- ಕೋರ್ಸುಗಳು: ಬಿ.ಕಾಂ–60, ಬಿ.ಸಿ.ಎ– 60, ಬಿ.ಬಿ.ಎ–60.
- ಸಂಯೋಜನೆ ಪ್ರಕಾರ : ಹೊಸ ಸಂಯೋಜನೆ

ವಿವರಣೆ:

ಸದರಿ ಮಹಾವಿದ್ಯಾಲಯ 2024–25ನೇ ಸಾಲಿನ ಎಲ್ಲಾ ಸಂಯೋಜನೆ ಪ್ರಕ್ರಿಯೆಗಳು ಮುಗಿದ ನಂತರ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಲು ಅನುಮತಿ ಕೋರಿ ಸಂಪರ್ಕಿಸಿದ್ದು, ಈ ವಿಷಯದ ಬಗ್ಗೆ ಸರ್ಕಾರದ ನಿರ್ದೇಶನ ಕೋರಿ ದಿನಾಂಕ: 21–09–2024 ರಂದು ಪತ್ರ ಬರೆಯಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಪತ್ರ ದಿನಾಂಕ: 05–10–2024ರಲ್ಲಿ EIMR ಸಂಸ್ಥೆಗೆ UUCMS Portalನಲ್ಲಿ ಅವಕಾಶ ಕಲ್ಪಿಸಿದ್ದು ಅದರ ಅನ್ವಯ 07–10–2024 ರಂದು ಆನ್‌ಲೈನ್ ನಲ್ಲಿ ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ.

ನಂತರ ಸರ್ಕಾರದ ಪತ್ರ ದಿನಾಂಕ: 04–12–2024 ರಲ್ಲಿ ಈ ಮಹಾ ಸಂಸ್ಥೆಯ ಹೊಸ ಸಂಯೋಜನೆಗೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿ ವರದಿ ಮತ್ತು ವಿಶ್ವವಿದ್ಯಾನಿಲಯಗಳ ಪ್ರಾಧಿಕಾರಗಳ ಶಿಫಾರಸ್ಸಿನೊಂದಿಗೆ 3 ದಿವಸಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಿದ್ದು, ಈ ಪ್ರಕ್ರಿಯೆಗಳನ್ನು ಜರುಗಿಸಲು ಕಾಲಾವಕಾಶ ಬೇಕಾಗಿರುತ್ತದೆ ಎಂದು ತಿಳಿಸಿ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಸಂಯೋಜನೆಯ ಎಲ್ಲಾ ಪ್ರಕಿಯೆಗಳು ದಿನಾಂಕ:20–07–2024ಕ್ಕೆ ಪೂರ್ಣಗೊಂಡಿರುವುದರಿಂದ ಸರ್ಕಾರದ ನಿರ್ದೇಶನ ಕೋರಿ ದಿನಾಂಕ:17–12–2024ರಂದು ಪತ್ರ ಬರೆಯಲಾಗಿದೆ.

ಈ ಮಧ್ಯೆ ಸದರಿ ಸಂಸ್ಥೆಯವರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿದ W.P No. 34421/2024 ರಲ್ಲಿ ದಿನಾಂಕ: 19.12.2024ರಂದು ಮಾನ್ಯ ಉಚ್ಚನ್ಯಾಯಾಲಯ ನೀಡಿದ ಮಧ್ಯಂತರ ಆದೇಶದ ಪ್ರಕಾರ ಸದರಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳನ್ನು ಬೇರೆ ಮಹಾವಿದ್ಯಾಲಯದಲ್ಲಿ ಬರೆಯಲು ಅನುಮತಿ ನೀಡಲಾಗಿದೆ.

ಈ ಅನುಮತಿ ಉಚ್ಚನ್ಯಾಯಾಲಯದ ಮೂಲ ರಿಟ್ ಅರ್ಜಿಯಲ್ಲಿ ನೀಡುವ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ದಿನಾಂಕ: 12.03.2025 ರಂದು ನ್ಯಾಯಾಲಯದ ಅಂತಿಮ ಆದೇಶ ನೀಡಿ ಸದರಿ ಸಂಸ್ಥೆಯು ಸಂಯೋಜನೆಗಾಗಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ಸೂಕ್ತ ನಿರ್ಧಾರ ಕೈಗೊಳ್ಳಲು ವಿಶ್ವವಿದ್ಯಾನಿಲಯಕ್ಕೆ ಆದೇಶಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಮಹಾವಿದ್ಯಾಲಯ ಮುಂದುವರಿಕೆ ಸಂಯೋಜನೆ ಕುರಿತು ಪರಿಶೀಲಸಿ ವರದಿ ಸಲ್ಲಿಸಲು ವಾಣಿಜ್ಯ ನಿಕಾಯದಡೀನರು ಡಾ. ಕೆ. ಆರ್. ಜಲಜಾ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸ್ಥಳೀಯ ವಿಚಾರಣಾ ಸಮಿತಿಗೆ ವಹಿಸಲಾಗಿದೆ. ಸದರಿ ಸಮಿತಿ ದಿನಾಂಕ: 21.03.2025 ರಂದು ಮಹಾ ವಿದ್ಯಾಲಯಕ್ಕೆ ಬೇಟಿ ನೀಡಿ ತಪಾಸಣೆ ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ. ಸ್ಥಳಿಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯಲ್ಲಿ EIMR Business School, Basavangudi, Bengaluru. ಕಾಲೇಜಿಗೆ ಬಿ.ಕಾಂ ಕೋರ್ಸಿಗೆ ವಿದ್ಯಾರ್ಥಿ ಪ್ರಮಾಣ–60 ಬಿ.ಸಿ.ಎ ಕೋರ್ಸಿಗೆ –60 ವಿದ್ಯಾರ್ಥಿ ಪ್ರಮಾಣ ಮತ್ತು ಬಿ.ಬಿ.ಎ ಕೋರ್ಸಿಗೆ–60 ವಿದ್ಯಾರ್ಥಿ ಪ್ರಮಾಣದೊಂದಿಗೆ 2024–25ನೇ ಸಾಲಿಗೆ ಮುಂದುವರಿಕೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಿರುತ್ತದೆ.

3. ಮಹಾವಿದ್ಯಾನಿಲಯದ ಹೆಸರು: IAS College of Education, No. 01 Chowdiah Block, R.T Nagar, Bangalore-560032.

ಕೋರ್ಸುಗಳು:ಬಿ.ಇಡಿ-100 ಸಂಯೋಜನೆ ಪ್ರಕಾರ : ಹೊಸ ಸಂಯೋಜನೆ.

**ವಿವರಣೆ:**

ಸದರಿ ಕಾಲೇಜಿನ ಆಡಳಿತ ಮಂಡಳಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಎನ್.ಸಿ.ಟಿ.ಇ. ನವ ದೆಹಲಿ ಅವರ ಮೇಲೆ ಹೂಡಲಾದ ದಾವೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯ ಈ ಕಾಲೇಜಿಗೆ ಮಾನ್ಯತೆಯನ್ನು ನೀಡಲು ಆದೇಶಿಸಿರುತ್ತಾರೆ. ಈ ಶಿಕ್ಷಣ ಸಂಸ್ಥೆಯು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಸದರಿ ಮಹಾವಿದ್ಯಾಲಯ 2024-25ನೇ ಸಾಲಿನ ಎಲ್ಲಾ ಸಂಯೋಜನೆ ಪ್ರಕ್ರಿಯೆಗಳು ಮುಗಿದ ನಂತರ ವಿಶ್ವವಿದ್ಯಾಲಯವನ್ನು ಸಂಪರ್ಕಿಸಿದ್ದು ಈ ಬಗ್ಗೆ ಸರ್ಕಾರದ ನಿರ್ದೇಶನ ಕೋರಿ ದಿನಾಂಕ: 03-10-2024 ರಂದು ಪತ್ರ ಬರೆಯಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಪತ್ರ ದಿನಾಂಕ: 07-10-2024ರಲ್ಲಿ IAS ಸಂಸ್ಥೆಗೆ ಅರ್ಜಿ ಸಲ್ಲಿಸಲು 1/2 ದಿವಸ UUCMS Portal ಅವಕಾಶ ಕಲ್ಪಿಸಿದ ಅನ್ವಯ 09-10-2024 ರಂದು ಆನ್ ಲೈನ್ ನಲ್ಲಿ ನಿಗಧಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ.

ನಂತರ ಸರ್ಕಾರದ ಪತ್ರ ದಿನಾಂಕ: 30-11-2024ರಲ್ಲಿ ಈ ಸಂಸ್ಥೆಯ ಹೊಸ ಸಂಯೋಜನೆಗೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿ ವರದಿ ಮತ್ತು ವಿಶ್ವವಿದ್ಯಾನಿಲಯಗಳ ಪ್ರಾಧಿಕಾರಗಳ ಶಿಫಾರಸ್ಸಿನೊಂದಿಗೆ 3 ದಿವಸಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಿದ್ದು, ಈ ಪ್ರಕ್ರಿಯೆಗಳನ್ನು ಜರುಗಿಸಲು ಕಾಲಾವಕಾಶ ಬೇಕಾಗಿರುತ್ತದೆ ಹಾಗೂ ವಿಶ್ವವಿದ್ಯಾನಿಲಯ 2024-25ನೇ ಸಾಲಿನ ಎಲ್ಲಾ ಸಂಯೋಜನೆ ಪ್ರಕ್ರಿಯೆಗಳು ದಿನಾಂಕ: 20-07-2024ಕ್ಕೆ ಪೂರ್ಣಗೊಂಡಿರುವುದರಿಂದ IAS ಶಿಕ್ಷಣ ಮಹಾವಿದ್ಯಾಲಯ ಸಂಯೋಜನೆ ಮುಂದುವರಿಕೆ ಕುರಿತಂತೆ ಸರ್ಕಾರಕ್ಕೆ ದಿನಾಂಕ: 17.12.2024 ರಂದು ಪತ್ರ ಬರೆದು ಸದರಿ ಮಹಾವಿದ್ಯಾಲಯದ 7 ವರ್ಷಗಳ ಅವಧಿಯ ಸಂಯೋಜನೆ ಮುಂದುವರಿಕೆ ಕುರಿತಂತೆ ಸರ್ಕಾರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನೊಂದಿಗೆ ಸಮಾಲೋಚಿಸಿ ಕೆಳಗಿನಂತೆ ಅಭಿಪ್ರಾಯ ವ್ಯಕ್ತ ಪಡಿಸಿದೆ.

**"ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59 ಅಥವಾ UGC (Affiliation of Colleges by Universities) Regulations 2009 ರಲ್ಲಿ ತಾತ್ಕಾಲಿಕ ಸಂಯೋಜನೆಯನ್ನು ಪ್ರತಿ ವರ್ಷ ಮುಂದುವರೆಸಲು ಅವಕಾಶವಿರುತ್ತದೆ. ಆದರೆ 7 ವರ್ಷಗಳ ಬಿಡುವಿನ ನಂತರ ಸಂಯೋಜನೆಯನ್ನು ನವೀಕರಿಸಲು ಸದರಿ ನಿಯಮಗಳಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ. NCTE ಯವರು ನೀಡಿದ ಮಾನ್ಯತೆ ಊರ್ಜಿತದಲ್ಲಿದ್ದರೆ ಸದರಿ ಕಾಲೇಜಿಗೆ ನಿಯಮಾನುಸಾರ ಸಂಯೋಜನೆಯನ್ನು ನೀಡಲು ಪರಿಗಣಿಸಬಹುದಾಗಿದೆ."**

IAS ಶಿಕ್ಷಣ ಮಹಾವಿದ್ಯಾಲಯದವರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ: 6543/2025 ಅಂತಿಮವಾಗಿ ಇತ್ಯರ್ಥವಾಗಿದ್ದು ಉಚ್ಚನ್ಯಾಯಾಲಯ ದಿನಾಂಕ: 05.03.2025 ರಂದು ನೀಡಿದ ತೀರ್ಪಿನಲ್ಲಿ IAS ಶಿಕ್ಷಣ ಮಹಾವಿದ್ಯಾಲಯ ದಿನಾಂಕ: 26.08.2024 ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಮನವಿ (ರಿಟ್ ಅರ್ಜಿಯ ಅನುಬಂಧ) ಹಾಗೂ ರಿಟ್ ಅರ್ಜಿಯ ಜೊತೆಗೆ ಲಗತ್ತಿಸಿರುವ ಉಳಿದ ಅನುಬಂಧಗಳನ್ನು ಗಮನದಲ್ಲಿಟ್ಟುಕೊಂಡು ಒಂದು ವಾರದ ಒಳಗೆ ಸೂಕ್ತ ಆದೇಶ ನೀಡಬೇಕೆಂದು ಅಥವಾ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆದೇಶ ನೀಡಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಮಹಾವಿದ್ಯಾಲಯ ಮುಂದುವರಿಕೆ ಸಂಯೋಜನೆ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಶಿಕ್ಷಣ ನಿಕಾಯದ ಡೀನರಾದ ಡಾ.ಕೆ.ಶಿವಶಂಕರ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸ್ಥಳೀಯ

ವಿಚಾರಣಾ ಸಮಿತಿಗೆ ವಹಿಸಲಾಗಿತ್ತು. ಸದರಿ ದಿನಾಂಕ: 21.03.2025ರಂದು ಮಹಾವಿದ್ಯಾಲಯಕ್ಕೆ ಬೇಟಿ ನೀಡಿ ತಪಾಸಣೆ ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ. ಸ್ಥಳಿಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯಲ್ಲಿ IAS College of Education, No. 01 Chowdiah Block, R.T Nagar, Bangalore-560032, ಕಾಲೇಜಿಗೆ ಬಿ.ಇಡಿ ಕೋರ್ಸಿಗೆ –100 ವಿದ್ಯಾರ್ಥಿ ಪ್ರಮಾಣದೊಂದಿಗೆ 2024–25ನೇ ಸಾಲಿಗೆ ಮುಂದುವರಿಕೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಿರುತ್ತದೆ.

ಮೇಲೆ ನಮೂದಿಸಿದ ಮೂರು ಮಹಾವಿದ್ಯಾಲಯ/ಸಂಸ್ಥೆಗಳಿಗೆ ತನಿಖೆ ಮಾಡಿ ಸಲ್ಲಿಸಿರುವ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ದಿನಾಂಕ: 25.03.2025ರಂದು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದ್ದು, ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಕೆಳಗೆ ನಮೂದಿಸಿದ 3 ಮಹಾವಿದ್ಯಾಲಯಗಳಿಗೆ 2024–25ನೇ ಸಾಲಿಗೆ ಮುಂದುವರಿಕೆ/ಹೊಸ ಸಂಯೋಜನೆ ನೀಡಲು ಸ್ಥಳೀಯ ವಿಚಾರಣಾ ಸಮಿತಿಗಳು ನೀಡಿದ ವರದಿಗಳ ಆಧಾರದ ಮೇಲೆ ವಿದ್ಯಾವಿಷಯಕ ಪರಿಷತ್ ಮಾಡಿರುವ ಶಿಫಾರಸ್ಸುಗಳನ್ನು ಅನುಮೋದಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

| ಕ್ರ.ಸಂ | ಕಾಲೇಜುಗಳ ಹೆಸರು | ಮುಂದುವರಿಕೆ/ಹೊಸ ಸಂಯೋಜನೆ | ವಿದ್ಯಾವಿಷಯಕ ಪರಿಷತ್ ಸಭೆ ಶಿಫಾರಸ್ಸು |
|---|---|---|---|
| **1.** | **United Mission Degree College, Sampangi Rama Nagar, Bengaluru** | ಮುಂದುವರಿಕೆ ಸಂಯೋಜನೆ | ಮುಂದುವರಿಕೆ ಸಂಯೋಜನೆ ನೀಡಲು ಸ್ಥಳೀಯ ವಿಚಾರಣಾ ಸಮಿತಿ ಮಾಡಿದ ಶಿಫಾರಸ್ಸನ್ನು ಅನುಮೋದಿಸಲು ತೀರ್ಮಾನಿಸಲಾಯಿತು |
| **2.** | **EIMR Business School, Basavangudi, Bengaluru** | ಹೊಸ ಸಂಯೋಜನೆ | ಹೊಸ ಸಂಯೋಜನೆ ನೀಡಲು ಸ್ಥಳೀಯ ವಿಚಾರಣಾ ಸಮಿತಿ ಮಾಡಿದ ಶಿಫಾರಸ್ಸನ್ನು ಅನುಮೋದಿಸಲು ತೀರ್ಮಾನಿಸಲಾಯಿತು |
| **3.** | **IAS College of Education, R.T. Nagar, Bengaluru** | ಹೊಸ ಸಂಯೋಜನೆ | |

ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿ ಕೊಟ್ಟಿರುವುದಕ್ಕೆ ಮಾನ್ಯ ಕುಲಪತಿಗಳಿಗೆ ಮತ್ತು ಸಭೆಯಲ್ಲಿ ಭಾಗವಹಿಸಿದ ಎಲ್ಲ ಗೌರವಾನ್ವಿತ ಸದಸ್ಯರಿಗೆ ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು